**ಕಂದಾಯ ಇಲಾಖೆ**

# ಉಪ ವಿಭಾಗಾಧಿಕಾರಿಗಳ ಹುದ್ದೆಯ ವಿವರ

ಸರ್ಕಾರ ರೂಪಿಸುವ ವಿವಿಧ ಆರ್ಥಿಕ ಮತ್ತು ಸಾಮಾಜಿಕ ಯೋಜನೆಗಳ ಸಮರ್ಪಕ ಅನುಷ್ಠಾನದಲ್ಲಿ ಕಂದಾಯ ಇಲಾಖೆಯ ತೀರಾ ಮಹತ್ವದ ಪಾತ್ರವನ್ನು ಹೊಂದಿದೆ. ಗ್ರಾಮವು ಕಂದಾಯ ಇಲಾಖೆಯಲ್ಲಿ ಆಡಳಿತ ನಿರ್ವಹಣೆಯ ಮೂಲ ಘಟಕವಾಗಿದ್ದು, ದೈನಂದಿನ ಸುಗಮ ಆಡಳಿತ ನಿರ್ವಹಣೆಯ ದೃಷ್ಟಿಯಿಂದ ರಾಜ್ಯವನ್ನು ವಿಭಾಗಗಳು, ಜಿಲ್ಲೆಗಳು, ಉಪ ವಿಭಾಗಗಳು, ತಾಲೂಕುಗಳು ಮತ್ತು ಹೋಬಳಿ/ವಲಯಗಳನ್ನಾಗಿ ವಿಂಗಡಿಸಲಾಗಿದೆ. ಈ ಬಗ್ಗೆ ಕರ್ನಾಟಕ ಭೂಕಂದಾಯ ಕಾಯ್ದೆ 1964 ರ ಕಲಂ 4 ರಲ್ಲಿ ತಿಳಿಸಲಾಗಿದ್ದು, ಇಲಾಖೆಯ ವಿವಿಧ ಹಂತಗಳಲ್ಲಿ ಕಾರ್ಯನಿರ್ವಹಿಸುವ ಅಧಿಕಾರಿಗಳ ವಿವರ ಈ ಕೆಳಗಿನಂತೆ ಇರುತ್ತದೆ.

| **ಅ.ನಂ** | **ಹಂತ** | **ಕಂದಾಯ ಇಲಾಖೆಯ ಅಧಿಕಾರಿ** |
|---|---|---|
| 1 | ಗ್ರಾಮ | ಗ್ರಾಮ ಲೆಕ್ಕಾಧಿಕಾರಿ |
| 2 | ಹೋಬಳಿ/ ವಲಯ | ಕಂದಾಯ ನಿರೀಕ್ಷಕ<br>ಉಪ ತಹಶೀಲದಾರ |
| 3 | ತಾಲೂಕು | ತಹಶೀಲದಾರ |
| 4 | ಉಪ ವಿಭಾಗ | ಉಪ ವಿಭಾಗಾಧಿಕಾರಿ |
| 5 | ಜಿಲ್ಲೆ | ಜಿಲ್ಲಾಧಿಕಾರಿ |
| 6 | ವಿಭಾಗ | ಪ್ರಾದೇಶಿಕ ಆಯುಕ್ತರು |

ಕರ್ನಾಟಕ ಭೂಕಂದಾಯ ಕಾಯ್ದೆ 1964 ರ ಕಲಂ 4 ರಲ್ಲಿ ``ಉಪ ವಿಭಾಗ`` ಕುರಿತು ವಿಶೇಷವಾಗಿ ಪ್ರಸ್ತಾಪಿಸಿಲ್ಲವಾದರೂ ಜಿಲ್ಲೆಯ ನಿರ್ದಿಷ್ಟವಾದ ಒಂದು ಅಥವಾ ಹೆಚ್ಚು ತಾಲೂಕುಗಳನ್ನೊಳಗೊಂಡ ಸಮೂಹದ ಕಂದಾಯ ಆಡಳಿತ ನಿರ್ವಹಣೆ ಕುರಿತು ಕರ್ನಾಟಕ ಭೂಕಂದಾಯ ಕಾಯ್ದೆ 1964 ರ ಕಲಂ 10 ರನ್ವಯ ಉಪ ವಿಭಾಗಾಧಿಕಾರಿಯವರನ್ನು ನೇಮಿಸಲಾಗುತ್ತಿದೆ. ಈ ಹುದ್ದೆಯಲ್ಲಿ ಕಾರ್ಯನಿರ್ವಹಿಸುವ ಅಧಿಕಾರಿಯವರು ಭಾರತೀಯ ಆಡಳಿತ ಸೇವೆಯ ಕಿರಿಯ ಶ್ರೇಣಿ ಅಥವಾ ಕರ್ನಾಟಕ ಆಡಳಿತ ಸೇವೆ (ಗ್ರುಪ್-ಎ) ಕಿರಿಯ ಶ್ರೇಣಿಗೆ ಸೇರಿದವರಾಗಿರುತ್ತಾರೆ.

ಉಪ ವಿಭಾಗಾಧಿಕಾರಿಗಳು ಉಪ ವಿಭಾಗದ ವ್ಯಾಪ್ತಿಯಲ್ಲಿ ಬರುವ ತಾಲೂಕುಗಳ ತಹಶೀಲದಾರರ ಕಾರ್ಯನಿರ್ವಹಣೆಯ ಮೇಲ್ವಿಚಾರಣೆ ನಡೆಸುತ್ತಾರೆ. ಅಲ್ಲದೇ ಇವರು ಉಪ ವಿಭಾಗೀಯ ದಂಡಾಧಿಕಾರಿಗಳಾಗಿ ಸಹ ಕಾರ್ಯನಿರ್ವಹಿಸುತ್ತಾರೆ. ಇವರು ಮುಖ್ಯವಾಗಿ ನಿರ್ವಹಿಸುವ ಕರ್ತವ್ಯಗಳ ವಿವರ ಕೆಳಗಿನಂತಿರುತ್ತದೆ.

1. ಉಪ ವಿಭಾಗ ವ್ಯಾಪ್ತಿಗೆ ಒಳಪಟ್ಟ ತಾಲೂಕುಗಳು ಕಂದಾಯ ಆಡಳಿತ ಕುರಿತು ಮೇಲ್ವಿಚಾರಣೆ, ಅಭಿವೃದ್ಧಿ ಕಾಮಗಾರಿಗಳ ಪರಿಶೀಲನೆ ಹಾಗೂ ಬರ/ಮಹಾಪೂರ ಒಳಗೊಂಡಂತೆ ವಿವಿಧ ಪ್ರಕೃತಿ ವಿಕೋಪಗಳ ಸಮರ್ಪಕ ನಿರ್ವಹಣೆ.

2. ವಿವಿಧ ಅಭಿವೃದ್ಧಿ ಕಾಮಗಾರಿಗಳ ಕುರಿತು ಭೂಸ್ವಾಧೀನ ಪ್ರಕ್ರಿಯೆ ಜರುಗಿಸುವುದು.

3. ವಿವಿಧ ಚುನಾವಣೆಗಳ ಮೇಲ್ವಿಚಾರಣೆ.

4. ಉಪ ವಿಭಾಗ ವ್ಯಾಪ್ತಿಯಲ್ಲಿ ಕಾಯ್ದೆ ಮತ್ತು ಸುವ್ಯವಸ್ಥೆ ಕಾಪಾಡಿಕೊಂಡು ಹೋಗುವುದು.

5. ಸರ್ಕಾರ ಹಾಗೂ ಜಿಲ್ಲಾಧಿಕಾರಿಗಳು ವಹಿಸಿಕೊಡುವ ಇನ್ನಿತರೇ ಕೆಲಸ ಕಾರ್ಯಗಳು.

ಉಪ ವಿಭಾಗಾಧಿಕಾರಿಗಳು ವಿವಿಧ ಕಾಯ್ದೆ/ನಿಯಮಗಳಡಿ ಹೊಂದಿರುವ ಅಧಿಕಾರಗಳು ಹಾಗೂ ಕರ್ತವ್ಯಗಳ ವಿವರಗಳನ್ನು ಇದರೊಂದಿಗೆ ಲಗತ್ತಿಟ್ಟು ಅನುಬಂಧದ ಭಾಗ-1 ಹಾಗೂ ಭಾಗ-2 ರಲ್ಲಿ ತೋರಿಸಲಾಗಿದೆ.

## ಉಪ ವಿಭಾಗಾಧಿಕಾರಿಗಳ ಅಧಿಕಾರ ಹಾಗೂ ಕರ್ತವ್ಯಗಳ ವಿವರಗಳು

### ಭಾಗ-1

| ಅ.ನಂ. | ಕಾಯ್ದೆ | ಕಲಂ | ವಿವರ |
|---|---|---|---|
| 1 | 2 | 3 | 4 |
| 1 | ಕರ್ನಾಟಕ ಭೂ ಕಂದಾಯ ಅಧಿನಿಯಮ-1964 | 10(2) | ಯಾವುದೇ ಉಪ-ವಿಭಾಗಾಧಿಕಾರಿಯನ್ನು ಒಂದು ಅಥವಾ ಹೆಚ್ಚಿನ ತಾಲೂಕುಗಳನ್ನೊಳಗೊಂಡ ಕಂದಾಯ ಉಪ-ವಿಭಾಗದ ಆಡಳಿತ ನೋಡಿಕೊಳ್ಳಲು ಸರಕಾರ ಆದೇಶಿಸಬಹುದು. ಅವನು ಅಧ್ಯಾಯ-V ಹಾಗೂ ಸರಕಾರದ ನಿರ್ದೇಶನಗಳಿಗೆ ಒಳಪಟ್ಟು ಜಿಲ್ಲಾಧಿಕಾರಿಗಳಿಗೆ ಪ್ರಧಾನವಾದ ಎಲ್ಲ ಅಧಿಕಾರಗಳನ್ನು ಚಲಾಯಿಸಬಹುದು. |
| | | 10(3) | ಉಪವಿಭಾಗದ ಪ್ರಭಾರ ಹೊಂದಿರದ ಉಪ ವಿಭಾಗಾಧಿಕಾರಿ ಸರ್ಕಾರದ ಆದೇಶಕ್ಕೆ ಒಳಪಟ್ಟು ಜಿಲ್ಲಾಧಿಕಾರಿಯು ವಹಿಸಿಕೊಟ್ಟ ಎಲ್ಲ ಕರ್ತವ್ಯ ಗಳನ್ನು ನಿರ್ವಹಿಸುತ್ತಾರೆ. |
| | | 11(1) | ಉಪವಿಭಾಗಾಧಿಕಾರಿಯು ತಾಲೂಕಿನ ತಹಶೀಲ್ದಾರರ ಮೇಲ್ವಿಚಾರಣಾಧಿಕಾರಿ ಆಗಿರುತ್ತಾರೆ. |
| | | 14(2) | ಜಿಲ್ಲಾಧಿಕಾರಿಯ ಗೈರ ಹಾಜರಾತಿಯ ಸಮಯದಲ್ಲಿ ಸರಕಾರವು ಬೇರೆ ವ್ಯವಸ್ಥೆ ಮಾಡದ ಹೊರತು ಕೇಂದ್ರ ಸ್ಥಾನದಲ್ಲಿಯ ಜೇಷ್ಠತಮ ಉಪ ವಿಭಾಗಾಧಿಕಾರಿ ಜಿಲ್ಲಾಧಿಕಾರಿಯಾಗಿ ಕಾರ್ಯ ನಿರ್ವಹಿಸುವರು. |
| | | 49(ಎ) | ಕಂದಾಯ ಅಧೀನ ಅಧಿಕಾರಿ ಹೊರಡಿಸಿದ ಆದೇಶದ ವಿರುದ್ಧ ಉಪವಿಭಾಗಾಧಿಕಾರಿಗಳು ಮೇಲ್ಮನವಿ ಪ್ರಾಧಿಕಾರಿಗಳಾಗಿದ್ದಾರೆ. |
| | | 67(2) | ಯಾವುದೇ ಸ್ವತ್ತಿನ ವಿಷಯದಲ್ಲಿ ರಾಜ್ಯ ಸರಕಾರದ ವಿರುದ್ಧ ಇರುವ ಹಕ್ಕು ಸಾಧನೆಯ ಬಗ್ಗೆ ಉಪ ವಿಭಾಗಾಧಿಕಾರಿ ವಿಚಾರಣೆ ನಡೆಸಿ ಇತ್ಯರ್ಥ ಪಡಿಸುವರು. |

| | | | |
|---|---|---|---|
| | | 69 | ಕಲಂ 67 ರ ಮೇರೆಗೆ ಅಥವಾ ಬೇರೆ ರೀತಿಯಲ್ಲಿ ಸರಕಾರಕ್ಕೆ ಸೇರಿದ ಜಮೀನನ್ನುಉಪವಿಭಾಗಾಧಿಕಾರಿ ವ್ಯವಸಾಯ, ಕೈಗಾರಿಕೆ, ಅಥವಾ ಯಾವುದೇ ಸಾರ್ವಜನಿಕ ಉಪಯೋಗಕ್ಕಾಗಿ ಮತ್ತು 12 ನೇ ಅಧ್ಯಾಯದ ಉಪಬಂಧಗೊಳಪಟ್ಟು ಕಟ್ಟಡಗಳ ನಿರ್ಮಾಣಕ್ಕಾಗಿ ವಿಲೇ ಮಾಡಬಹುದು. |
| | | 84 | ಭೂ ಕಂದಾಯ ಪಾವತಿಯಿಂದ ಪೂರ್ಣವಾಗಿ ವಿನಾಯಿತಿ ಹೊಂದಿರದ ಮತ್ತು ಆಧ್ಯಾಯ 10 ರ ಅಡಿಯಲ್ಲಿ ಆಕಾರ (ಭೂ ಕಂದಾಯ) ವನ್ನು ನಿಗದಿಪಡಿಸಿದ ಎಲ್ಲ ಜಮೀನುಗಳಿಗೆ ಉಪ ವಿಭಾಗಾಧಿಕಾರಿ ರಾಜ್ಯ ಸರಕಾರ ನಿಗದಿಪಡಿಸಿದ ಗರಿಷ್ಠ ಅವಧಿಗಾಗಿ ಭೂ ಕಂದಾಯವನ್ನು ನಿಗದಿಪಡಿಸುವರು. ಇಂತಹ ಅವಧಿಯು ಮುಗಿದ ನಂತರ ಅದನ್ನು ಕಾಲಕಾಲಕ್ಕೆ ಪರಿಷ್ಕರಿಸುವರು. |
| | | 94(C) | ಉಪ ವಿಭಾಗದ ವ್ಯಾಪ್ತಿಯಲ್ಲಿ ಬರುವ ಪುರಸಭೆ ವ್ಯಾಪ್ತಿಯಲ್ಲಿಯ ಆಕ್ರಮ ಕಟ್ಟಡಗಳನ್ನು ಸಕ್ರಮ ಗೊಳಿಸುವ ಅಧಿಕಾರವನ್ನು ಉಪವಿಭಾಗಾಧಿಕಾರಿ ಹೊಂದಿದ್ದಾರೆ. |
| | | 111 | ಯಾವುದೇ ಜಮೀನು ವಿಭಜನೆ ಮಾಡುವಲ್ಲಿ ಉಂಟಾದ ಖರ್ಚನ್ನು ಉಪ ವಿಭಾಗಾಧಿಕಾರಿ ನಿಗದಿಪಡಿಸುವರು ಮತ್ತು ಅದನ್ನು ಭೂ ಕಂದಾಯ ಬೇಡಿಕೆ ಎಂದು ಪರಿಗಣಿಸಿ ವಸೂಲ ಮಾಡಲು ಕ್ರಮ ಜರುಗಿಸುವುದು. |
| | | 131(b) | ನಕಾಶೆ ತಯಾರಿಕೆಯ ಅಥವಾ ಪರಿಷ್ಕರಣೆಯ ಮೌಲ್ಯವನ್ನು ಉಪ ವಿಭಾಗಾಧಿಕಾರಿಗಳಿಗೆ ಕಡಿಮೆ ಇಲ್ಲದ ಕಂದಾಯ ಅಧಿಕಾರಿ ನಿಗದಿಪಡಿಸುವರು. |
| | | 136(2) | ಕಲಂ 129 ರಡಿ ತಹಶೀಲದಾರರು ಹೊರಡಿಸಿದ ಆದೇಶದ ವಿರುದ್ಧ ಸಲ್ಲಿಸಿದ ಮೇಲ್ಮನವಿಗಳನ್ನು ಉಪ ವಿಭಾಗಾಧಿಕಾರಿಗಳು ಪರಿಶೀಲಿಸಿ ಆದೇಶಿಸುವ ಅಧಿಕಾರ ಹೊಂದಿದ್ದಾರೆ. |

| | | | |
|---|---|---|---|
| | | 149 | ಕಲಂ 148 ರಲ್ಲಿ ಪ್ರತ್ಯೇಕವಾಗಿ ಇರಿಸಲ್ಪಟ್ಟ ಕಟ್ಟಡ ನಿವೇಶನಗಳನ್ನು ಉಪ ವಿಭಾಗಾಧಿಕಾರಿ ವಿಲೇ ಮಾಡಬಹುದಾಗಿದೆ. |
| | | 151(1) | ಕಲಂ 151 ರಡಿಯಲ್ಲಿಯ ವಿನಾಯಿತಿಯ ಹಕ್ಕನ್ನು ಉಪ ವಿಭಾಗಾಧಿಕಾರಿ ನಿರ್ಧರಿಸುವರು. |
| | | 153(1) (b) 153(2) | ಮೋಜಣಿ ಮಾಡುವ ಸಂದರ್ಭದಲ್ಲಿ ಉಪ ವಿಭಾಗಾಧಿಕಾರಿ ಮೋಜಣಿ ಫೀ ಯನ್ನು ನಿರ್ಧರಿಸುವರು. ಉಪ ವಿಭಾಗಾಧಿಕಾರಿ ನೋಟೀಸ ಕೊಟ್ಟ 3 ತಿಂಗಳೊಳಗಾಗಿ ಅದು ಸಂದಾಯ ವಾಗತಕ್ಕದ್ದು. |
| | | 160(2) | ಕಂದಾಯ ಬಾಕಿಯ ಬಗೆಗೆ ಜಮಾಬಂದಿಯಲ್ಲಿ ಜಿಲ್ಲಾಧಿಕಾರಿ / ಉಪ ವಿಭಾಗಾಧಿಕಾರಿ ಪ್ರಮಾಣೀಕರಿಸಿದ ಲೆಕ್ಕದ ತಖ್ತೆಯು ನಿರ್ಣಾಯಕ ಸಾಕ್ಷಿಯಾಗಿರುವುದು. |
| | | 176 | ಸ್ಥಿರಾಸ್ಥಿ ಹರಾಜನ್ನು ಉಪ ವಿಭಾಗಾಧಿಕಾರಿ ರದ್ದುಪಡಿಸಬಹುದು ಮತ್ತು ಮರು ಹರಾಜಿಗೆ ಆದೇಶಿಸಬಹುದು. |
| | | 177 | ಉಪ ವಿಭಾಗಾಧಿಕಾರಿ ಹರಾಜನ್ನು ಸ್ಥಿರೀಕರಿಸುವ ಆದೇಶ ಹೊರಡಿಸಬಹುದಾಗಿದೆ. |
| | | 178 | ಕಲಂ 176(1)(b) ರ ಅಡಿಯಲ್ಲಿ ಜಮಾ ಮಾಡಿದ ಮೊಬಲಗನ್ನು ಜಮಾ ಮಾಡಿದ ವ್ಯಕ್ತಿಗೆ ವಾಪಸ ಮಾಡಲು ಉಪ ವಿಭಾಗಾಧಿಕಾರಿ ಆದೇಶ ಮಾಡಬಹುದಾಗಿದೆ. |
| 2 | ಕರ್ನಾಟಕ ಭೂ ಕಂದಾಯ ನಿಯಮಗಳು 1966 | 43(3) | ಶಿರಸ್ತೇದಾರ ಅಥವಾ ಇತರ ಅಧಿಕಾರಿಯು ಕಲಂ 43(1) ರಡಿಯಲ್ಲಿ ಮಾಡಿದ ಮೂಲ ಆದೇಶದ ವಿರುದ್ಧ ಮೇಲ್ಮನವಿಯಲ್ಲಿ ಉಪ ವಿಭಾಗಾಧಿಕಾರಿಯ ತೀರ್ಮಾನ ಅಂತಿಮ ವಾದದ್ದಾಗಿದೆ. |
| | | 69(1) | ನಿಯಮ 67 ರಲ್ಲಿ ತಹಶೀಲದಾರರು ಹೊರಡಿಸಿದ ಆದೇಶಗಳ ಮೇಲೆ ಮೇಲ್ಮನವಿಯನ್ನು ಉಪ ವಿಭಾಗಾಧಿಕಾರಿ ಇತ್ಯರ್ಥಪಡಿಸಲು ಅಧಿಕಾರ ಹೊಂದಿದ್ದಾರೆ. |

| | | | |
|---|---|---|---|
| | | 71 | ಉಪ ವಿಭಾಗದ ವ್ಯಾಪ್ತಿಗೊಳಪಟ್ಟ ತಾಲೂಕುಗಳ ಹಕ್ಕು ಪತ್ರಿಕೆಗಳನ್ನು ಪುನ: ಬರೆಯಲು ಆದೇಶಿಸಬಹುದಾಗಿದೆ. |
| | | 85(1) | ಸರ್ವೆ ಸೆಟ್ಲಮೆಂಟ ಮತ್ತು ಭೂ ದಾಖಲೆಗಳ ನಿರ್ದೇಶಕರ ಸಮಾಲೋಚನೆ ನಂತರ ಉಪ ವಿಭಾಗಾಧಿಕಾರಿ ಕಲಂ 153(1) (ಬ) ಅಡಿಯಲ್ಲಿ ಪಾವತಿಸಬೇಕಾದ ಮೋಜಣಿ ಶುಲ್ಕ ನಿರ್ಧರಿಸುವರು. |
| | | 91(2) | ಸ್ವತ್ತಿನ ಕಾರ್ಡ ಅಥವಾ ರಜಿಸ್ಟರಗಳನ್ನು ಪುನ: ಬರೆದಾಗ ಉಪ ವಿಭಾಗಾಧಿಕಾರಿ ಶೇ 5 ರಷ್ಟು ನಮೂದಗಳನ್ನು ಪರೀಕ್ಷಿಸುವರು. |
| | | 108 D(6) | ಅನಧಿಕೃತ ಸಾಗುವಳಿ ಸಕ್ರಮಗೊಳಿಸುವ ಸಂಬಂಧದಲ್ಲಿ ರಚಿಸಿದ ಸಮಿತಿಯು ಹೊರಡಿಸಿದ ಆದೇಶದ ವಿರುದ್ಧ ಉಪ ವಿಭಾಗಾಧಿಕಾರಿಗಳು ಮೇಲ್ಮನವಿ ಪ್ರಾಧಿಕಾರಿಗಳು ಆಗಿದ್ದಾರೆ. |
| | | 108EE (ಅ) | ಉಪ ವಿಭಾಗಾಧಿಕಾರಿ ಹೆಚ್ಚುವರಿ ಸಮಿತಿಯ ಅಧ್ಯಕ್ಷರಾಗಿರುತ್ತಾರೆ. |
| | | 108K | ಯಾವದೇ ವ್ಯಕ್ತಿಯು ತಪ್ಪು ಮಾಹಿತಿ ನೀಡಿ ಜಮೀನು ಮಂಜೂರಾದ ಪ್ರಕರಣಗಳಲ್ಲಿ ಆದೇಶಗಳನ್ನು ರದ್ದುಪಡಿಸಿ ಜಮೀನು ಮರಳಿ ಪಡೆಯಲು ಉಪ ವಿಭಾಗಾಧಿಕಾರಿಯವರು ಅಧಿಕಾರ ಹೊಂದಿದ್ದಾರೆ. |
| | | 113(2) | ಬಾಕಿದಾರನು ಜಿಲ್ಲಾಧಿಕಾರಿಯ ಅನುಮತಿ ಇಲ್ಲದೇ ಸ್ವತ: ಅಥವಾ ಮತ್ತೊಬ್ಬ ವ್ಯಕ್ತಿಯ ಮೂಲಕ ಖರೀದಿಸಿದರೆ ಅಂತಹ ಮಾರಾಟವನ್ನು ಉಪ ವಿಭಾಗಾಧಿಕಾರಿ ರದ್ದುಪಡಿಸಬಹುದು ಅಂಥ ಪಕ್ಷಗಾರನಿಂದ ಎಲ್ಲ ವೆಚ್ಚವನ್ನು ವಸೂಲ ಮಾಡಬಹುದಾಗಿದೆ. |
| 3 | ಕರ್ನಾಟಕ ಭೂ ಮಂಜೂರಾತಿ ನಿಯಮಗಳು 1969 | 7(ii) | ಉಪವಿಭಾಗಾಧಿಕಾರಿಯವರು ಕೃಷಿ ಉದ್ದೇಶಕ್ಕಾಗಿ 4 ಹೆಕ್ಟೇರು ಒಣಭೂಮಿ ಇಲ್ಲವೇ 2 ಹೆಕ್ಟೇರು ತರಿ ಅಥವಾ ಭಾಗಾಯತ ಸರ್ಕಾರಿ ಪಡ ಜಮೀನನ್ನು ಸರ್ಕಾರದ ಅನುಮೋದನೆ ಪಡೆದು ಮಂಜೂರು ಮಾಡಬಹುದಾಗಿದೆ. |

| | | | |
|---|---|---|---|
| 4 | 1. ಕರ್ನಾಟಕ ಭೂ ಸುಧಾರಣೆ ಕಾಯ್ದೆ 1961/74<br>2. ಕರ್ನಾಟಕ ಭೂಸುಧಾರಣೆ ನಿಯಮಗಳು 1974 | 48(2) | ಉಪ ವಿಭಾಗಾಧಿಕಾರಿಯವರು ತಾಲೂಕಿನ ಭೂನ್ಯಾಯ ಮಂಡಳಿಯ ಅಧ್ಯಕ್ಷರಾಗಿ ಕಾರ್ಯ ನಿರ್ವಹಿಸುತ್ತಾರೆ. |
| | | 77-A | ಈ ಕಾಯ್ದೆ ಅಡಿಯಲ್ಲಿ ದಾಖಲಾದ ನಮೂನೆ 7-ಅ ರ ಅರ್ಜಿಗಳನ್ನು ಉಪ ವಿಭಾಗಾಧಿಕಾರಿಯವರು ಇತ್ಯರ್ಥಪಡಿಸುವ ಅಧಿಕಾರ ಹೊಂದಿದ್ದಾರೆ. |
| | | 79-A & B | ಈ ನಿಯಮ ಉಲ್ಲಂಘನೆ ಪ್ರಕರ್ಣಗಳನ್ನು ಉಪ ವಿಭಾಗಾಧಿಕಾರಿಯವರು ಇತ್ಯರ್ಥಪಡಿಸುವರು. |
| | | 80 | ಯಾವುದೇ ವ್ಯಕ್ತಿಗೆ ಕೃಷಿ ಜಮೀನನ್ನು ಕೆಲ ನಿರ್ಭಂಧನೆಗಳೊಂದಿಗೆ ಸ್ವಾಧೀನಪಡಿಸಿಕೊಳ್ಳಲು ಅನುಮತಿ ನೀಡುವ ಅಧಿಕಾರ ಹೊಂದಿರುತ್ತಾರೆ. |
| | | ಕಲಂ 82 ಹಾಗೂ ನಿಯಮ 36 | ಗ್ರಾಮ ಲೆಕ್ಕಾಧಿಕಾರಿ, ಕಂದಾಯ ಅಧಿಕಾರಿ, ನೋಂದಣಿ ಹಾಗೂ ಭೂ ದಾಖಲೆ ಅಧಿಕಾರಿಗಳು ಈ ಕಾಯ್ದೆ ಉಲ್ಲಂಘಿಸಿ ನಡೆಸಿದ ವ್ಯವಹಾರಗಳನ್ನು ಗೊತ್ತುಪಡಿಸಿದ ಅಧಿಕಾರಿ ಅಂದರೆ ಉಪ ವಿಭಾಗಾಧಿಕಾರಿಗಳ ಗಮನಕ್ಕೆ ತರಬೇಕಾಗಿತ್ತದೆ. |
| | | ಕಲಂ 83 ಹಾಗೂ ನಿಯಮ 37 | ಉಪ ವಿಭಾಗಾಧಿಕಾರಿಯವರು ಕಲಂ 82 ರಲ್ಲಿ ವರದಿಯಾದ ಪ್ರಕರಣಗಳನ್ನು ಸ್ಥೂಲ ವಿಚಾರಣೆ ಮಾಡಿ ಇತ್ಯರ್ಥಪಡಿಸುವರು. |
| | | 84 | ಸತತ ಎರಡು ವರ್ಷಗಳಲ್ಲಿ ಸಾಗು ಮಾಡದೇ ಇರುವ ಜಮೀನಿನ ಮಾಲಿಕರು/ ಹಿತಾಸಕ್ತಿಯುಳ್ಳ -ವರಿಗೆ ಅಂಥಹ ಜಮೀನನ್ನು ಒಂದು ವರ್ಷದ ಒಳಗಾಗಿ ಸಾಗು ಮಾಡುವಂತೆ ಉಪ ವಿಭಾಗಾಧಿಕಾರಿಗಳು ಸೂಚಿಸಿ ನೋಟೀಸು ನೀಡಬಹುದಾಗಿದೆ. |
| | | 85 | ಸಾಗುವಳಿ ಮಾಡುವ ಜಮೀನನ್ನು ಗರಿಷ್ಠ 5 ವರ್ಷಗಳವರೆಗೆ ಲಾವಣಿ ಆಧಾರದ ಮೇಲೆ ನೀಡಲು ಉಪ ವಿಭಾಗಾಧಿಕಾರಿಯವರು ಅಧಿಕಾರ ಹೊಂದಿದ್ದಾರೆ. |

| | | | |
|---|---|---|---|
| | | 86 | ಕಲಂ 85 ರ ಅಡಿಯಲ್ಲಿ ನೀಡಲಾದ ಲಾವಣಿ ಅಧಾರಿತ ಜಮೀನು ರದ್ದುಗೊಳಿಸಿ ಬೇರೆಯವರಿಗೆ ಶರ್ತುಗಳ ಮೇರೆಗೆ ನೀಡಬಹುದಾಗಿದೆ. |
| | | 87 | ಉಪ ವಿಭಾಗಾಧಿಕಾರಿಯವರು ಜಮೀನಿನ ಬಗ್ಗೆ ಕರಾರ ಪತ್ರ ಹೊರಡಿಸಲು ಅಧಿಕಾರ ಹೊಂದಿದ್ದಾರೆ. |
| | | 88 | ಜಮೀನ ಲಾವಣಿ ಅವಧಿ ಮುಕ್ತಾಯವಾದ ನಂತರ ಜಮೀನು ಕಬ್ಜೆ ಮರಳಿ ಪಡೆದು ಆ ನಂತರ ಕಬ್ಜೆಯನ್ನು ಅರ್ಹ ವ್ಯಕ್ತಿಗೆ ನೀಡಲು ಅಧಿಕಾರ ಹೊಂದಿರುತ್ತಾರೆ. |
| | | 118-2B | ತಹಶೀಲದಾರರ ಆದೇಶಗಳ ವಿರುದ್ಧ ಸಂಬಂಧಿಸಿದ ಉಪವಿಭಾಗಾಧಿಕಾರಿಗಳು ಮೇಲ್ಮನವಿ ಪ್ರಾಧಿಕಾರಿಯಾಗಿದ್ದು ಇವರ ಆದೇಶವು ಅಂತಿಮ ವಾಗಿರುತ್ತದೆ. |
| | | 20-A | ವಿಧವಾ ಭೂಮಾಲೀಕರಿಗೆ ವರ್ಷಾಸನ ನೀಡುವ ಸಂಬಂಧದ ಬಿಲ್ಲುಗಳಿಗೆ ಉಪವಿಭಾಗಾಧಿಕಾರಿಗಳು ಮೇಲು ರುಜು ಹಾಕಬೇಕಾಗುತ್ತದೆ. |
| 5 | 1) ಭೂ ಸ್ವಾಧೀನ ಕಾಯ್ದೆ-1894<br><br>2) ಭೂಸ್ವಾಧೀನ ( ಕರ್ನಾಟಕ ವಿಸ್ತರಿತ ಹಾಗೂ ತಿದ್ದುಪಡಿ) ಕಾಯ್ದೆ-1961.<br>3) ಕರ್ನಾಟಕ ಭೂ ಸ್ವಾಧೀನ ನಿಯಮಗಳು 1965.<br>4) ಕರ್ನಾಟಕ ಭೂ ಸ್ವಾಧೀನ (ಕಂಪನಿಗಳು) ನಿಯಮಗಳು 1973 | 3(ಸಿ)<br>6(2) | ವಿಶೇಷ ಭೂಸ್ವಾಧೀನ ಅಧಿಕಾರಿಗಳ ಕಾರ್ಯವ್ಯಾಪ್ತಿಯಲ್ಲಿ ಬರುವ ಯೋಜನೆಗಳನ್ನು ಹೊರತುಪಡಿಸಿ ಇತರ ಭೂಸ್ವಾಧೀನ ಪ್ರಕರಣಗಳಲ್ಲಿ ಉಪ ವಿಭಾಗಾಧಿಕಾರಿಗಳು, ಜಿಲ್ಲಾಧಿಕಾರಿಗಳ ಪರವಾಗಿ ಉಪವಿಭಾಗ ವ್ಯಾಪ್ತಿಯಲ್ಲಿ ಭೂಸ್ವಾಧೀನ ಪ್ರಕ್ರಿಯೆ ನಡೆಸಬಹುದಾಗಿದೆ.<br><br>ಉಪವಿಭಾಗಾಧಿಕಾರಿಗಳು ಭೂಸ್ವಾಧೀನ ಅಧಿಕಾರಿಗಳಾಗಿದ್ದಾರೆ. |
| 6 | The Karnataka Acquisition of Lands for grant of House Sites Act 1972 | 3(6) | ಉಪವಿಭಾಗಾಧಿಕಾರಿಗಳು ತಮಗೆ ಪ್ರತ್ಯಾಯೋಜಿಸಿದ ಅಧಿಕಾರದ ಮೇರೆಗೆ ವಹಿವಾಟದಾರರಿಗೆ ಲಿಖಿತ ನೋಟೀಸು ಜ್ಯಾರಿ ಮಾಡಬಹುದಾಗಿದೆ. |

| | | | |
|---|---|---|---|
| | [G.O No:DPC:221:DRH:73(i) dt:10-10-1973 (delegated)<br><br>No:FD:HLA:76 dt:14-06-1976 (delegated)] | 3(7) | ಬಲಪ್ರಯೋಗದಿಂದ ಜಮೀನು ಕಬ್ಜಾ ಪಡೆಯಲು ಉಪ ವಿಭಾಗಾಧಿಕಾರಿಗಳು ಅಧಿಕಾರ ಹೊಂದಿದ್ದಾರೆ |
| | | 4(3) | ಉಪ ವಿಭಾಗಾಧಿಕಾರಿಗಳು ರಾಮನಗರಂ ಮತ್ತು ದೊಡ್ಡಬಳ್ಳಾಪೂರ ಅವರನ್ನು ಹೊರತುಪಡಿಸಿ ಇನ್ನುಳಿದ ಉಪ ವಿಭಾಗಾಧಿಕಾರಿಗಳವರಿಗೆ ಭೂಸ್ವಾಧೀನಕ್ಕೊಳಪಟ್ಟ ಜಮೀನುಗಳ ಪರಿಹಾರ ಧನ ಸಂದಾಯ ಮಾಡುವ ಕುರಿತು ಯಾವುದೇ ರೀತಿಯ ಒಪ್ಪಂದಕ್ಕೆ ಬಾರದೇ ಇದ್ದಲ್ಲಿ ಅಂತಹ ಪ್ರಕರಣಗಳಲ್ಲಿ ನೀಡಬೇಕಾದ ಪರಿಹಾರಧನ ಮತ್ತು ಅದನ್ನು ಯಾರಿಗೆ ಸಂದಾಯ ಮಾಡಬೇಕೆನ್ನುವ ಕುರಿತು ನಿರ್ಧರಿಸುವ ಅಧಿಕಾರವನ್ನು ವಹಿಸಿ ಕೊಡಲಾಗಿದೆ. |
| 7 | The Karnataka Acquisition of lands for grant House Sites Rules 1973 | ಕಲಂ 3 (1) | ನಿವೇಶನರಹಿತ ದುರ್ಬಲ ವರ್ಗದವರಿಗೆ ಮನೆ ನಿವೇಶನ ಒದಗಿಸುವಲ್ಲಿ ಪುರಸಭೆ/ನಗರಸಭೆ ಮಹಾನಗರ ಪಾಲಿಕೆ /ತಾಲೂಕ ಪಂಚಾಯತಗಳಿಂದ ಭೂಸ್ವಾಧೀನಪಡಿಸಿಕೊಳ್ಳುವ ಪ್ರಸ್ತಾವನೆಗಳನ್ನು ಉಪವಿಭಾಗಾಧಿಕಾರಿಗಳಿಗೆ ಸಲ್ಲಿಸಬೇಕಾಗುತ್ತದೆ. |
| | | ಕಲಂ 3(2) | ಇಂತಹ ಪ್ರಸ್ತಾವನೆಗಳನ್ನು ಸ್ವೀಕರಿಸಿದ ನಂತರ ಉಪ ವಿಭಾಗಾಧಿಕಾರಿಯವರು ಕಲಂ 3(1) ರಡಿಯಲ್ಲಿ ನಮೂನೆ-ಅ ರಲ್ಲಿ ಕರಡು ಅಧಿಸೂಚನೆ ಪ್ರಕಟಗೊಂಡ ನಂತರ ಉಪ ವಿಭಾಗಾಧಿಕಾರಿಗಳು ನಮೂನೆ-ಬಿ ರಡಿಯಲ್ಲಿ ಜಮೀನಿನ ಮಾಲಿಕರಿಗೆ ನೋಟೀಸು ನೀಡಬೇಕಾಗುತ್ತದೆ. |
| | | ಕಲಂ 4(1) | ಕಲಂ 3(1) ರಡಿ ಅಧಿಸೂಚನೆ ಪ್ರಕಟಗೊಂಡ ನಂತರ ಉಪ ವಿಭಾಗಾಧಿಕಾರಿಗಳು ನಮೂನೆ - ಬಿ ರಡಿಯಲ್ಲಿ ಜಮೀನಿನ ಮಾಲಿಕರಿಗೆ ನೋಟೀಸು ನೀಡಬೇಕಾಗುತ್ತದೆ. |
| | | ಕಲಂ 6(2) | ಕಲಂ 3(2) ರಡಿಯಲ್ಲಿ ನೀಡಲಾದ ನೋಟೀಸಿಗೆ ಜಮೀನಿನಲ್ಲಿ ಆಸಕ್ತಿಯುಳ್ಳ ವ್ಯಕ್ತಿ ನೀಡಿದ ಆಕ್ಷೇಪಣೆಗಳ ಬಗ್ಗೆ ವಿಚಾರಣೆಗಾಗಿ ದಿನಾಂಕ ನಿಗದಿಪಡಿಸಿ ಸಂಬಂಧಿಸಿದವರಿಗೆ ಉಪ ವಿಭಾಗಾಧಿಕಾರಿಗಳು ನೋಟೀಸು ನೀಡಬೇಕು. |

| | | | |
|---|---|---|---|
| | | ಕಲಂ 6(3) | ನಿಗದಿತ ದಿನಾಂಕದಂದು ಈ ಆಕ್ಷೇಪಣೆಗಳನ್ನು ಉಪ ವಿಭಾಗಾಧಿಕಾರಿಗಳು ಪರಿಶೀಲಿಸಿ ಇತ್ಯರ್ಥಪಡಿಸಲು ಅಧಿಕಾರ ಹೊಂದಿದ್ದಾರೆ. |
| | | ಕಲಂ 8 | ಪ್ರತಿಯೊಂದು ಆಕ್ಷೇಪಣೆಗಳ ಕುರಿತಂತೆ ಉಪ ವಿಭಾಗಾಧಿಕಾರಿಗಳು ತಮ್ಮ ಅಭಿಪ್ರಾಯದೊಂದಿಗೆ ವರದಿಯನ್ನು ಸರಕಾರದ ಆದೇಶಕ್ಕಾಗಿ ಸಲ್ಲಿಸಬೇಕಾಗುತ್ತದೆ. |
| 8 | ಕರ್ನಾಟಕ ಔದ್ಯೋಗಿಕ ಪ್ರದೇಶ ಅಭಿವೃದ್ಧಿ ನಿಯಮಗಳು-1966. | ನಿಯಮ-14 | ಕರ್ನಾಟಕ ಪ್ರದೇಶ ಅಭಿವೃದ್ಧಿ ಕಾಯ್ದೆ-1966 ರ ಕಲಂ 28 ಮತ್ತು 29 ರಡಿ ಭೂಸ್ವಾಧೀನ ಅಧಿಕಾರವನ್ನು ಉಪವಿಭಾಗಾಧಿಕಾರಿಗಳವರಿಗೆ ವಹಿಸಿಕೊಡಬಹುದಾಗಿದೆ. |
| 9 | The Karnataka Grant of land in case of Construction of Dwelling Houses in occupied land Rules 1999 | ನಿಯಮ 4 ಮತ್ತು 7 | ಉಪ ವಿಭಾಗದ ವ್ಯಾಪ್ತಿಯಲ್ಲಿ ಬರುವ ಪುರಸಭೆಗಳ ಪ್ರದೇಶದಲ್ಲಿನ ಅನಧಿಕೃತ ಕಟ್ಟಡಗಳಿಗೆ ಸಂಬಂಧಿಸಿದಂತೆ ಈ ನಿಯಮಗಳ ನಿಯಮ 4 ರನ್ವಯ ವಿಚಾರಣೆ ನಡೆಸಲು ಉಪ ವಿಭಾಗಾಧಿಕಾರಿಗಳು ಗೊತ್ತುಪಡಿಸಿದ ಪ್ರಾಧಿಕಾರಿಯಾಗಿದ್ದಾರೆ. |
| 10 | ಕರ್ನಾಟಕ ಪರಿಶಿಷ್ಠ ಜಾತಿ ಮತ್ತು ಪರಿಶಿಷ್ಠ ಪಂಗಡಗಳವರ ( ಹಲವು ಜಮೀನುಗಳ ಪರಭಾರೆ ನಿಷೇಧ) ಕಾಯ್ದೆ 1978 ಹಾಗೂ ನಿಯಮಗಳು 1979 | ಕಲಂ - 5 ಮತ್ತು ನಿಯಮ 3 | ಉಪ ವಿಭಾಗಾಧಿಕಾರಿಗಳು, ಕಾಯ್ದೆಯ ಕಲಂ-4ರ ಅನುಬಂಧಗಳನ್ವಯ, ಪರಿಶಿಷ್ಟ ಜಾತಿ : ಪರಿಶಿಷ್ಟ ಪಂಗಡಗಳವರ ಜಮೀನುಗಳ ವರ್ಗಾವಣೆಯು ಅಸಿಂಧು ಅಂತಾ ಕಂಡುಬಂದಲ್ಲಿ, ಅಂತಹ ಜಮೀನನ್ನು ಅನುಭೋಗದಾರರಿಂದ ಕಬ್ಜಾ ಪಡೆದು ಅವರನ್ನು ಅಲ್ಲಿಂದ ಹೊರ ಹಾಕಲು ಅಧಿಕಾರ ಹೊಂದಿದ್ದಾರೆ. |
| 11 | ಕರ್ನಾಟಕ ಬಾಡಿಗೆ ನಿಯಂತ್ರಣ ಕಾಯ್ದೆ 1999 | ಕಲಂ 23 | ಸರ್ಕಾರದವರು ಉಪ ವಿಭಾಗಾಧಿಕಾರಿಯವರನ್ನು ಅವರ ಅಧಿಕಾರ ವ್ಯಾಪ್ತಿಯಲ್ಲಿ ಬರುವ ನಗರಗಳ ಬಾಡಿಗೆ ನಿಯಂತ್ರಣಾಧಿಕಾರಿಯನ್ನಾಗಿ ನೇಮಿಸ ಬಹುದಾಗಿದೆ. |

| | | | |
|---|---|---|---|
| 12 | 1) ಮುಂಬಯಿ ಪರಗಣಾ ಮತ್ತು ಕುಲಕರ್ಣಿ ವತನ ರದ್ಧತಿ ಕಾಯ್ದೆ 1950<br>2) ಮುಂಬಯಿ ಪರ್ಸನಲ್ ಇನಾಂ ರದ್ಧತಿ ಕಾಯ್ದೆ 1952<br>3) ಮುಂಬಯಿ ಸರ್ವಿಸ್ ಇನಾಂ (ಯುಸಫುಲ್ ಟು ಕಮ್ಯೂನಿಟಿ) ರದ್ಧತಿ ಕಾಯ್ದೆ 1953<br>4) ಮುಂಬಯಿ ವಿಲೀನ ಸಂಸ್ಥಾನಗಳ ಮತ್ತು ಪ್ರದೇಶಗಳ (ಜಹಗೀರುಗಳ) ರದ್ಧತಿ ಕಾಯ್ದೆ 1953<br>5) ಮುಂಬಯಿ ವಿಲೀನ ಸಂಸ್ಥಾನಗಳ ಮಿಸಲೇನಿಯಸ್ ಎಲಿನೇಷನ್ ಕಾಯ್ದೆ 1955<br>6) ಮುಂಬಯಿ ಸರಂಜಾಮು ಜಹಗೀರುಗಳು ಮತ್ತು ಇತರೆ ರಾಜಕೀಯ ಸ್ವರೂಪ ನಿಯಮಗಳು 1952 | ಸರ್ಕಾರದ ಆದೇಶ (1) No: RD:11: INM:74 ದಿನಾಂಕ: 18-5-74<br><br>(2) No: RD 256 INM:90 ದಿನಾಂಕ: 4-9-71 | ಬೆಳಗಾವಿ ವಿಭಾಗಕ್ಕೆ ಸಂಬಂಧಿಸಿದಂತೆ ಸರ್ಕಾರಕ್ಕೆ ಪುನರ್ ಗ್ರಹಿತವಾದ/ನಿಹಿತವಾದ ವಿವಿಧ ವತನ ಜಮೀನುಗಳ ಮರು ಮಂಜೂರಿ/ ಮಂಜೂರಿ ಮಾಡಲು ಹಾಗೂ ಹೊಸ ಶರ್ತಿನಿಂದ ಹಳೇ ಶರ್ತಿಗೆ ಮಾರ್ಪಾಡಿಸಲು ಉಪ ವಿಭಾಗಾಧಿಕಾರಿಗಳು ಅಧಿಕಾರ ಹೊಂದಿದ್ದಾರೆ. |
| 13 | ಕರ್ನಾಟಕ ಹಲವು ಇನಾಂಗಳ ರದ್ಧತಿ ಕಾಯ್ದೆ 1977 ಸರ್ಕಾರದ ಅಧಿಸೂಚನೆ ಕ್ರ:RD:11:INM:80 ದಿ: 01-05-1981 | | ಈ ಕಾಯ್ದೆಯಡಿ ಜಿಲ್ಲಾಧಿಕಾರಿಯವರು ನಿರ್ವಹಿಸುವ ಎಲ್ಲ ಅಧಿಕಾರಗಳನ್ನು ಉಪ ವಿಭಾಗಾಧಿಕಾರಿಗಳವರಿಗೆ ವಹಿಸಿಕೊಡಲಾಗಿದೆ. |
| 14 | ಮೈಸೂರ ( ರಿಲಿಜಿಯಸ್ ಮತ್ತು ಚಾರಿಟೆಬಲ್ ಇನಾಮಗಳ ರದ್ದತಿ ಕಾಯ್ದೆ-1955. | 26(1) | ಇನಾಮ ಜಮೀನುಗಳ ರೈತರಿಗೆ ಭೂ ಭಾಡಿಗೆ ವಸೂಲ ಮಾಡಲು ಉಪ ವಿಭಾಗಾಧಿಕಾರಿಗಳು ಅಧಿಕಾರ ಹೊಂದಿದ್ದಾರೆ., ಈ ಮೊದಲು ಅವರು ಭೂ ಭಾಡಿಗೆ ಸಂದಾಯ ಮಾಡಲು ವಿಫಲರಾದ ರೈತರಿಗೆ ಕಾರಣ ಕೇಳುವ ನೋಟೀಸು ನೀಡಲು ಅಧಿಕಾರ ಹೊಂದಿದ್ದಾರೆ. |
| 15 | ಕರ್ನಾಟಕ ಅರಣ್ಯ ಕಾಯ್ದೆ 1969 | | ಉಪವಿಭಾಗಾಧಿಕಾರಿಗಳುತಮ್ಮ ಪ್ರವಾಸ ಕಾಲದಲ್ಲಿ ಗ್ರಾಮ ಅರಣ್ಯಗಳು ಮತ್ತು ಈ ಸಂಬಂಧದಲ್ಲಿ ಗ್ರಾಮ ಪಂಚಾಯತ ನಿರ್ವಹಿಸಿದ ಲೆಕ್ಕ ಪತ್ರಗಳು ಹಾಗೂ ವಹಿಗಳನ್ನು ತಪಾಸಿಸಬಹುದಾಗಿದೆ. |
| 16 | ಕರ್ನಾಟಕ ಅರಣ್ಯ ಸಂಹಿತೆ | ಖಂಡಿಕೆ 119(ii) 150(2) | ಇನಾಮ ಮತ್ತು ಖಾಸಗಿ ಜಮೀನುಗಳಲ್ಲಿನ ರೂ.10,000/- ಗಳಿಗಿಂತ ಕಡಿಮೆ ಕಿಮ್ಮತ್ತಿನ ಅರಣ್ಯ ಹುಟ್ಟುವಳಿಯನ್ನು ತೆಗೆಯಲು, ಉಪವಿಭಾಗಾಧಿಕಾರಿಗಳು ಜಮೀನು ಮಾಲಿಕತ್ವದ ಬಗ್ಗೆ ಅಭಿಪ್ರಾಯ ನೀಡುವ ಅಧಿಕಾರ ಹೊಂದಿದ್ದಾರೆ. |

| | | | |
|---|---|---|---|
| 17 | ಕರ್ನಾಟಕ ನೀರಾವರಿ ಅಧಿನಿಯಮಗಳು 1965 | 21-ಎ (2) | ತಹಶೀಲದಾರರು ನಿರ್ಧರಿಸಿದ ನಿರ್ವಹಣಾ ಕರದ ಆದೇಶದ ವಿರುದ್ಧ ಉಪ ವಿಭಾಗಾಧಿಕಾರಿಗಳು ಮೇಲ್ಮನವಿ ಪ್ರಾಧಿಕಾರಿಗಳಾಗಿದ್ದಾರೆ. |
| 18 | ಕರ್ನಾಟಕ ಭೂ ಅಭಿವೃದ್ಧಿ (ಸಾಲಗಳು) ಕಾಯ್ದೆ 1963 ಮತ್ತು ನಿಯಮಗಳು 1966 | ನಿಯಮ 8 | ಉಪ ವಿಭಾಗಾಧಿಕಾರಿಗಳು ರೂ.2,500/- ಗಳ ವರೆಗೆ ಸಾಲ ಮಂಜೂರು ಮಾಡಬಹುದಾಗಿದೆ. |
| 19 | ಕರ್ನಾಟಕ ಕೃಷಿಕರ (ಸಾಲಗಳು) ಕಾಯ್ದೆ 1963 ಮತ್ತು ನಿಯಮಗಳು 1966 | ನಿಯಮ 8 | ಉಪ ವಿಭಾಗಾಧಿಕಾರಿಗಳು ರೂ.2,000/- ಗಳ ವರೆಗೆ ಸಾಲ ಮಂಜೂರು ಮಾಡಬಹುದಾಗಿದೆ. |
| 20 | ರೈಸ್ ಮಿಲ್ಲಿಂಗ್ ಇಂಡಸ್ಟ್ರೀ (ರೇಗ್ಯೂಲೇಷನ್) ಕಾಯ್ದೆ 1958 | ಕಲಂ 9 | ಉಪ ವಿಭಾಗಾಧಿಕಾರಿಗಳು ಅಕ್ಕಿ ಗಿರಣಿಗಳ ತಪಾಸಣೆ ನಡೆಸಬಹುದಾಗಿದೆ. |
| 21 | ಕರ್ನಾಟಕ ಪಂಚಾಯತ ರಾಜ್ ಕಾಯ್ದೆ-1993. | 13(2) | ಯಾವುದೇ ವ್ಯಕ್ತಿಯು ನಿಯಮ- 13(1) ರಡಿ, ಗ್ರಾಮ ಪಂಚಾಯತ ಸದಸ್ಯತ್ವದಿಂದ ಅನರ್ಹ-ಗೊಂಡಿರುವ ಇಲ್ಲವೆ ಅನರ್ಹಗೊಳ್ಳುವ ಪ್ರಶ್ನೆಗೆ ಸಂಬಂಧಿಸಿದಂತೆ ಉಪವಿಭಾಗಾಧಿಕಾರಿಗಳು ತಾವಾಗಿಯೇ ಇಲ್ಲವೆ ಈ ಸಂಬಂಧದಲ್ಲಿ ಸ್ವೀಕೃತಿಯಾದ ವರದಿ ಆಧರಿಸಿ ಸಂಬಂಧಿಸಿದ ವ್ಯಕ್ತಿಗೆ ತನ್ನ ಅಹವಾಲು ಸಲ್ಲಿಸಲು ಸೂಕ್ತ ಸಮಯಾವಕಾಶ ನೀಡಿ ಸೂಕ್ತವಾದ ನಿರ್ಣಯ ತೆಗೆದುಕೊಳ್ಳಬಹುದಾಗಿದೆ. |
| | | 48(1) | ಗ್ರಾಮ ಪಂಚಾಯತ ಆಧ್ಯಕ್ಷನು, ಸಂಬಂಧಿಸಿದ ಉಪ ವಿಭಾಗಾಧಿಕಾರಿಯವರಿಗೆ ತನ್ನ ಸ್ಥಾನಕ್ಕೆ ರಾಜಿನಾಮೆ ಪತ್ರವನ್ನು ನೀಡಬಹುದಾಗಿದೆ. ಅದರಂತೆ ಉಪಾಧ್ಯಕ್ಷನು, ಅಧ್ಯಕ್ಷರ ಗೈರ ಹಾಜರಾತಿಯಲ್ಲಿ ಉಪವಿಭಾಗಾಧಿಕಾರಿಯವರಿಗೆ ತನ್ನ ಸ್ಥಾನಕ್ಕೆ ರಾಜಿನಾಮೆ ಸಲ್ಲಿಸಬಹುದಾಗಿದೆ. |
| | | 48(3) | ಈ ಮೇಲಿನ ಉಪಬಂಧದನ್ವಯ ಉಪ ವಿಭಾಗಾಧಿಕಾರಿಯವರಿಂದ ಸ್ವೀಕರಿಸಿದ ರಾಜಿನಾಮೆಯು ಉಪವಿಭಾಗಾಧಿಕಾರಿಯವರಿಂದ ಸ್ವೀಕೃತಿಯಾದ ದಿನಾಂಕದಿಂದ 10 ದಿನಗಳ ತರುವಾಯ ಜ್ಯಾರಿಗೆ ಬರುತ್ತದೆ. |

| | | | |
|---|---|---|---|
| | | 64(6) | 1993 ರ ಕರ್ನಾಟಕ ಪಂಚಾಯತ ರಾಜ್ ಅಧಿನಿಯಮ ಜ್ಯಾರಿಯಲ್ಲಿ ಬಂದ ದಿನಬದಂದು 5 ನೇ ಉಪ ನಿಯಮದಡಿ ಜಿಲ್ಲಾ ಪರಿಷತ್‌ನ ಲೋಕೋಪಯೋಗಿ ಕಾಮಗಾರಿ ಮತ್ತು ಸೌಲಭ್ಯ ಸಮಿತಿಯ ಮುಂದೆ ಇತ್ಯರ್ಥಕ್ಕಾಗಿ ಬಾಕಿ ಇದ್ದ ಅಪೀಲುಗಳನ್ನು ಉಪವಿಭಾಗಾಧಿಕಾರಿಗಳು ಇತ್ಯರ್ಥಪಡಿಸಬಹುದಾಗಿದೆ. |
| | | 70(4) | 1993 ರ ಕರ್ನಾಟಕ ಪಂಚಾಯತ ರಾಜ್ ಅಧಿನಿಯಮ ಜ್ಯಾರಿಯಲ್ಲಿ ಬಂದ ದಿನದಂದು 3 ನೇ ಉಪ ನಿಯಮದಡಿ ಜಿಲ್ಲಾ ಪರಿಷತ್ ಸಾಮಾನ್ಯ ಸ್ಥಾಯಿ-ಸಮಿತಿ ಮುಂದೆ ಇತ್ಯರ್ಥಕ್ಕಾಗಿ ಬಾಕಿ ಇದ್ದ ಅಪೀಲುಗಳನ್ನು ಉಪವಿಭಾಗಾಧಿಕಾರಿಗಳು ಇತ್ಯರ್ಥಪಡಿಸಬಹುದಾಗಿದೆ. |
| | | 88 | ಗ್ರಾಮ ಪಂಚಾಯತಿಯು ತನ್ನ ಪ್ರದೇಶ ವ್ಯಾಪ್ತಿಯಲ್ಲಿ ಸ್ಮಶಾನ ಸ್ಥಳವಾಗಿ ಉಪಯೋಗಿಸುತ್ತಿರುವ ಜಾಗೆಯು, ಆರೋಗ್ಯಕ್ಕೆ ಹಾನಿಕಾರವೆಂದು ಅಭಿಪ್ರಾಯ ಪಟ್ಟು ಪ್ರಸ್ತಾವನೆ ಸಲ್ಲಿಸಿದ ಸಂದರ್ಭದಲ್ಲಿ ಉಕ್ತವೆಂಬ ರೀತಿಯಲ್ಲಿ ವಿಚಾರಣೆ ನಡೆಸಿ, ಉಪವಿಭಾಗಾಧಿಕಾರಿಗಳು ಅಂತ ಜಾಗೆಯನ್ನು ಸ್ಮಶಾನ ಅಂತಾ ಉಪಯೋಗಿ ಸುವದನ್ನು ಆ ದಿನದಿಂದಿಲೇ ನಿರ್ಬಂಧಿಸಿ ಅಧಿಸೂಚನೆಯನ್ನು ಹೊರಡಿಸಬಹುದಾಗಿದೆ. |
| | | ಕಲಂ 211(1) ಮತ್ತು ನಿಯಮ 3 | ಗ್ರಾಮ ಪಂಚಾಯತದಿಂದ ಅಥವಾ ಅವರ ವಿರುದ್ಧವಾಗಿ ಯಾವುದೇ ವ್ಯಕ್ತಿಯು ಕೃಷಿ ಭೂಮಿ ಹೊರುತು ಪಡಿಸಿ ಇತರೆ ಭೂಮಿಯ ಹಕ್ಕನ್ನು ಕ್ಲೇಮು ಮಾಡಿರುವಲ್ಲಿ ಉಪ ಭಾಗಾಧಿಕಾರಿಯವರು ಸೂಕ್ತ ನೋಟೀಸು ನೀಡಿ ವಿಚಾರಣೆ ಮಾಡಿದ ತರುವಾಯ ಆ ಬಗ್ಗೆ ನಿರ್ಧರಿಸಿ ಆದೇಶ ಹೊರಡಿಸಬಹುದಾಗಿದೆ. |

| | | | |
|---|---|---|---|
| 22 | ಕರ್ನಾಟಕ ಪಂಚಾಯತ ರಾಜ್ ( ತಾ .ಪಂ. ಗಳ ಅಧ್ಯಕ್ಷಮತ್ತು ಉಪಾಧ್ಯಕ್ಷರ ಚುನಾವಣೆ) ನಿಯಮಗಳು 1994. | ನಿಯಮ-3 | ತಾಲೂಕ ಪಂಚಾಯತ ರಚನೆಯ ತರುವಾಯ ಅದರ ಪ್ರಥಮ ಸಭೆಯನ್ನು ಕರೆದು, ಅಧ್ಯಕ್ಷ ಮತ್ತು ಉಪಾಧ್ಯಕ್ಷರ ಚುನಾವಣೆಯನ್ನು ಉಪ ವಿಭಾಗಾಧಿಕಾರಿಗಳು ಅಧಿಕಾರ ಹೊಂದಿದ್ದಾರೆ. ಸದರಿಯವರು ಈ ಅನುಬಂಧದಲ್ಲಿ ಸಭೆ ನಡೆಸಲು ಉದ್ದೇಶಿಸಿದ ದಿನಾಂಕದಿಂದ ಕನಿಷ್ಟ 7 ದಿನಗಳಿಗಿಂತ ಕಡಿಮೆ ಇಲ್ಲದಂತೆ ಎಲ್ಲ ಸದಸ್ಯರಿಗೆ ತಿಳುವಳಿಕೆ ಪತ್ರ ಕಳುಹಿಸಬೇಕು. |
| | | 3-A<br>3-B<br>3-C<br>3-D | ಉಪ ವಿಭಾಗಾಧಿಕಾರಿಗಳಿಗೆ ಚುನಾವಣೆ ಪ್ರಕ್ರಿಯೆ ಕುರಿತು ವಿಧಾನ ಮತ್ತು ಅಧಿಕಾರಿಗಳನ್ನು ಗೊತ್ತು ಪಡಿಸಲಾಗಿದೆ. |
| 23 | ಕರ್ನಾಟಕ ಪಂಚಾಯತ ರಾಜ್ ( ಗ್ರಾಮ ಪಂಚಾಯತ ಅಧ್ಯಕ್ಷಮತ್ತು ಉಪಾಧ್ಯಕ್ಷರ ವಿರುದ್ಧ ಅವಿಶ್ವಾಸ ಮಂಡನೆ) ನಿಯಮಗಳು 1994. | ನಿಯಮ 3 | ಗ್ರಾಮ ಪಂಚಾಯತ ಅಧ್ಯಕ್ಷ ಮತ್ತು ಉಪಾಧ್ಯಕ್ಷರ ವಿರುದ್ಧ ಕಲಂ 49 ರಡಿ, ಅವಿಸ್ವಾಸ ಮಂಡಿಸಬಯಸಿದಲ್ಲಿ ಗ್ರಾಮ ಪಂಚಾಯತದ ಒಟ್ಟು ಸದಸ್ಯರ ಮೂರರ ಒಂದು ಭಾಗದಷ್ಟು ಸದಸ್ಯರು ಸಹಿ ಮಾಡಿದ ನೋಟೀಸು ಮತ್ತು ಯಾವದೇ ಇಬ್ಬರು ಸದಸ್ಯರು ಸಹಿ ಮಾಡಿದ ಪ್ರಸ್ತಾಪಿತ ಸೂಚನೆಯ ಪ್ರತಿಯನ್ನು ಉಪವಿಭಾಗಾಧಿಕಾರಿ-ಗಳವರಿಗೆ ನೀಡತಕ್ಕದ್ದು. ಅಂಥಹ ನೋಟೀಸು ಸ್ವೀಕರಿಸಿದ ತುರವಾಯ ಉಪವಿಭಾಗಾಧಿಕಾರಿಗಳು ಉಪ ನಿಯಮ 2 ರ ಮೇರೆಗೆ ಸಭೆ ಕರೆದು ಉಪ ನಿಯಮ 3 ರಿಂದ 9 ರಡಿ ಗೊತ್ತುಪಡಿಸಿದಂತ ಕ್ರಮ ಜರುಗಿಸಬೇಕಾಗುತ್ತದೆ. |
| 24 | ಕರ್ನಾಟಕ ಪುರಸಭೆಗಳ ಕಾಯ್ದೆ 1964 | 82(3) | ಜಿಲ್ಲಾಧಿಕಾರಿಗಳು ಈ ನಿಯಮದಡಿ ಹೊಂದಿರುವ ಅಧಿಕಾರವನ್ನು ಉಪ ವಿಭಾಗಾಧಿಕಾರಿಗಳು ಸಹ ಚಲಾಯಿಸಬಹುದಾಗಿದೆ. |
| | | 106(2) | ಉಪವಿಭಾಗಾಧಿಕಾರಿಗಳು ತಮ್ಮ ಅಧಿಕಾರ ವ್ಯಾಪ್ತಿಯಲ್ಲಿ ಬರುವ ಪುರಸಭೆಗಳಲ್ಲಿನ ಆಸ್ತಿಗಳ ಕರ ಪರಿಷ್ಕರಣಾಧಿಕಾರಿಗಳಾಗಿದ್ದಾರೆ. |
| | | 109(3) | ಉಪ ವಿಭಾಗಾಧಿಕಾರಿಗಳು ಪರಿಷ್ಕರಣೆ ಹಾಗೂ ಅಂತಿಮವಾಗಿ ದೃಢೀಕರಿಸುವ ಪ್ರಾಧಿಕಾರಿ ಆಗಿದ್ದಾರೆ |

| | | | |
|---|---|---|---|
| | | 268(1) | ಪುರಸಭೆ ಮತ್ತು ಬಾಧಿತ ವ್ಯಕ್ತಿಯವರಲ್ಲಿ ಭಿನ್ನಾಭಿಪ್ರಾಯವಿದ್ದಲ್ಲಿ ಅಂತಹ ಪ್ರಕರಣಗಳಲ್ಲಿ ಪರಿಹಾರಧನ ವಿತರಿಸುವ ಪ್ರಮಾಣವನ್ನು ಉಪ ವಿಭಾಗಾಧಿಕಾರಿಗಳು ನಿರ್ಧರಿಸಿ ಖಚಿತಪಡಿಸಿಕೊಳ್ಳ ಬಹುದಾಗಿದೆ. ಇವರ ಗೈರು ಹಾಜರಾತಿಯಲ್ಲಿ ಜಿಲ್ಲಾಧಿಕಾರಿಗಳು ಈ ಕ್ರಮ ಜರುಗಿಸಬಹುದಾಗಿದೆ. |
| 25 | ಸಾರ್ವತ್ರಿಕ ಚುನಾವಣೆಗಳು : ಮತದಾರರ ನೋಂದಣಿ ಅಧಿಕಾರಿಗಳ ಕೈಪಿಡಿ | | ಉಪವಿಭಾಗೀಯ ದಂಡಾಧಿಕಾರಿ/ಉಪ ವಿಭಾಗಾಧಿಕಾರಿಯವರು ಅವರ ಕಾರ್ಯ ವ್ಯಾಪ್ತಿಯಲ್ಲಿ ಬರುವ ರಾಜ್ಯ ವಿಧಾನಸಭಾ ಚುನಾವಣಾ ಕ್ಷೇತ್ರಗಳಿಗೆ ಮತದಾರರ ನೋಂದಣಿ ಅಧಿಕಾರಿಗಳಾಗಿದ್ದಾರೆ. |
| 26 | ಕರ್ನಾಟಕ ನಾಗರೀಕ ಸೇವೆಗಳ ( ವ, ನಿ ಮತ್ತು ಮೇ ) ನಿಯಮಗಳು-1957. | ನಿಯಮ 6, 8 ಮತ್ತು 9 ಅನುಬಂಧ -II ನಿಯಮ 10(1) | ಉಪವಿಭಾಗಾಧಿಕಾರಿಯವರು ತಮ್ಮ ಅಧಿಕಾರ ವ್ಯಾಪ್ತಿಯಲ್ಲಿ ಕಂದಾಯ ಇಲಾಖೆಯ ಸಿ ವೃಂದದ ನೌಕರರಿಗೆ ನಿಯಮ 8(iii) ರಿಂದ (iv a ) ರಡಿ ಗೊತ್ತುಪಡಿಸಿದ ದಂಡನೆಯನ್ನು ವಿಧಿಸಲು ಅಧಿಕಾರ ಹೊಂದಿದ್ದಾರೆ.<br>ಸರಕಾರದ ಅಧಿಸೂಚನೆ ಕ್ರ:ಜಿಎಡಿ:4:ಎಸ್ ಎಸ್ ಆರ್-73, ದಿನಾಂಕ 23-6-1973 ರಡಿ , ತಮ್ಮ ಅಧಿಕಾರ ವ್ಯಾಪ್ತಿಗೆ ಒಳಪಟ್ಟ ಗ್ರಾಮಲೆಕ್ಕಾಧಿಕಾರಿ ಯವರನ್ನು ಸೇವೆಯಿಂದ ಅಮಾನತ್ತಿನಲ್ಲಿ ಇಡಲು ಅಧಿಕಾರ ಹೊಂದಿದ್ದಾರೆ. |
| 27 | ಕರ್ನಾಟಕ ಪರಿಶಿಷ್ಟ ಜಾತಿಗಳು, ಪರಿಶಿಷ್ಟ ಪಂಗಡಗಳು ಮತ್ತು ಇತರ ಹಿಂದುಳಿದ ವರ್ಗಗಳ (ನೇಮಕಾತಿ, ಮೀಸಲಾತಿ ಮತ್ತು ಇತರೆ) ಕಾಯ್ದೆ 1990 ಹಾಗೂ ನಿಯಮಗಳು 1992 ಮತ್ತು ತಿದ್ದುಪಡಿ ನಿಯಮಗಳು 2000 | ಕಲಂ 4ಬಿ(2) ಮತ್ತು ನಿಯಮ 3 ಬಿ | ಜಾತಿ ಮತ್ತು ಆದಾಯ ಪ್ರಮಾಣ ಪತ್ರ ನೀಡುವ ಸಂಬಂಧದಲ್ಲಿ ಕಲಂ 4-ಎ ರಡಿ ತಹಶೀಲದಾರರು ಹೊರಡಿಸುವ ಆದೇಶದ ವಿರುದ್ಧ ಉಪ ವಿಭಾಗಾಧಿಕಾರಿಯವರು ಮೇಲ್ಮನವಿ ಪ್ರಾಧಿಕಾರಿ ಯಾಗಿದ್ದಾರೆ. |
| | | ನಿಯಮ 4ರ ಪರಂತುಕ ಮತ್ತು ನಿಯಮ 5ರ ಪರಂತುಕ | ಪರಿಶಿಷ್ಟ ಜಾತಿ ಮತ್ತು ಪರಿಶಿಷ್ಟ ಪಂಗಡಗಳವರ ಹಾಗೂ ಇತರೆ ಹಿಂದುಳಿದ ವರ್ಗಗಳವರ ಜಾತಿ ಪ್ರಮಾಣ ಪತ್ರಗಳ ಪರಿಶೀಲನೆ ಕುರಿತು ಸರ್ಕಾರ ರಚಿಸುವ ಹೆಚ್ಚುವರಿ ಸಮಿತಿಗಳಲ್ಲಿ ಉಪ ವಿಭಾಗಾಧಿಕಾರಿಗಳು ಸದಸ್ಯರಾಗಿದ್ದಾರೆ. |

# ಉಪ ವಿಭಾಗಾಧಿಕಾರಿಗಳು , ಉಪ ವಿಭಾಗೀಯ ದಂಡಾಧಿಕಾರಿಗಳಾಗಿ ನಿರ್ವಹಿಸುವ ಅಧಿಕಾರ ಹಾಗೂ ಕರ್ತವ್ಯಗಳ ವಿವರಗಳು

## ಭಾಗ-2

| ಅ.ನಂ | ಕಾಯ್ದೆ | ಕಲಂ | ವಿವರ |
|---|---|---|---|
| 1 | 2 | 3 | 4 |
| 1 | 1) The Bounded labour system (Abolition) Act 1976 | ಕಲಂ 8(2) | To restore possession of homestead Or other premises to bounded labour. |
| | | ಕಲಂ 11 | ಜಿಲ್ಲಾ ದಂಡಾಧಿಕಾರಿಯವರು ಈ ಕಾಯ್ದೆಯಡಿಯಲ್ಲಿ ತಮ್ಮ ಅಧಿಕಾರವನ್ನು ತಮ್ಮ ಅಧೀನ ಉಪ ವಿಭಾಗೀಯ ದಂಡಾಧಿಕಾರಿಯವರಿಗೆ ಪ್ರತ್ಯಾಯೋಜಿಸಬಹುದಾಗಿದೆ. ಈ ರೀತಿ ಅಧಿಕಾರ ಪ್ರತ್ಯಾಯೋಜಿಸಿದಾಗ ಉಪ ವಿಭಾಗಾಗೀಯ ದಂಡಾಧಿಕಾರಿಯು ತನ್ನ ಕಾರ್ಯ ಕ್ಷೇತ್ರದಲ್ಲಿ ಅಧಿಕಾರ ಚಲಾಯಿಸಬಹುದಾಗಿದೆ. |
| | | ಕಲಂ 13(3) | ಉಪವಿಭಾಗ ಮಟ್ಟದ ವಿಚಕ್ಷಣಾ ಕಮೀಟಿಗೆ ಉಪವಿಭಾಗೀಯ ದಂಡಾಧಿಕಾರಿಯವರು ಅಧ್ಯಕ್ಷರಾಗಿರುತ್ತಾರೆ. |
| | | ಕಲಂ 21 | ಸರಕಾರ ನ್ಯಾಯಕ ದಂಡಾಧಿಕಾರಿಯವರಲ್ಲಿ ನಿಹಿತವಾದ ಅಧಿಕಾರಗಳನ್ನು ಉಪವಿಭಾಗೀಯ ದಂಡಾಧಿಕಾರಿಯವರಿಗೆ ಅಧಿಕಾರ ಪ್ರತ್ಯಾಯೋಜಿಸಿದಾಗ ಈ ಕಾಯ್ದೆಯಡಿಯಲ್ಲಿ ಅಧಿಕಾರಗಳು ಉಪ ವಿಭಾಗೀಯ ದಂಡಾಧಿಕಾರಿಗಳು ಚಲಾಯಿಸಬಹುದು. |

| | | | |
|---|---|---|---|
| | 2) The Bonded Labour System (abolition) Rules-1976. | --<br><br>ಕಲಂ 5 | The S.D.Ms. have to play the part of Coordinating agencies for monitoring the implementation of the Act.<br><br>ಕಲಂ 21 ರಲ್ಲಿ ನ್ಯಾಯಿಕ ದಂಡಾಧಿಕಾರಿಯ ಅಧಿಕಾರವು ಉಪವಿಭಾಗೀಯ ದಂಡಾಧಿಕಾರಿಗಳಿಗೆ ಪ್ರತ್ಯೋಜಿಸಿದಾಗ ಜೀತದಾಳಿಗೆ ಸಂಬಂಧಿಸಿದ ಆಸ್ತಿಯನ್ನು ಅವನಿಗೆ ಮರಳಿ ಸ್ವಾಧೀನ ವಹಿಸಿ ಕೊಡಲು ಉಪವಿಭಾಗೀಯ ದಂಡಾಧಿಕಾರಿಗಳು ಅಧಿಕಾರ ಹೊಂದಿದ್ದಾರೆ. |
| 2 | Criminal Procedure Code-1973. | 58 | ಉಪವಿಭಾಗೀಯ ದಂಡಾಧಿಕಾರಿಗಳು ಈ ಕೆಳಗೆ ನಮೂದಿಸಿರುವ ಅಧಿಕಾರಗಳನ್ನು ಹೊಂದಿದ್ದಾರೆ.<br>To be reported by officer-in-charge of P.S. about the cases or persons arrested without warrant. |
| | | 94 | To issue search warrant or to make orders. |
| | | 133<br><br>142<br><br>143 | To pass a conditional order for removal of nuisance.<br>To issue injection pending inquiry U/s-33.<br>To prohibit-repetion or continuance of public nuisance. |
| | | 144 | A) To issue order in the urgent cases of nuisance or apprehended danger (The danger is ordinarily prohibitory)<br>B) To issue temporary orders in urgent cases of nuisance or apprehended danger.<br>(C)To pass an order ex-parte under section 144 Cr.P.C.<br>Examples of the orders that may be passed U/s 144. |

| | | | |
|---|---|---|---|
| | | | (a) To prohibit an assembly, or a meeting or Procession for prevention of breach of peace but not for interfering with the lawful exercise of legal rights.<br>(b) To Prohibit carrying of arms or weapons.<br>(c) To Prohibit a person from entering into a Particular area.<br>(d) To Prohibit using of loudspeakers.<br>(e) To prohibit people from coming out of their houses on the public road/street/lane (curfew).<br>(f) To prohibit raising of Pr ovocative slogans which are likely to cause breach of peace. |
| | | 174(4) | To hold inquest that means to make an inquiry into the cause of unnatural or suspicious death. |
| | | 176(3) | To cause a dead body to be disinterred. |
| | | 176 read with 174 | The Magistrate has the following Powers in regard to inquest. |
| | | 411 | To make over or Withdraw from any Magistrate subordinate to him cases which have been started before him or which have been made over to any Magistrate sub-ordinate to him respectively. |

| | | | |
|---|---|---|---|
| 3 | Immoral Traffic (Prevention) | | ಉಪವಿಭಾಗೀಯ ದಂಡಾಧಿಕಾರಿಗಳು ಈ |
| | Act -1956. | | ಕೆಳಗಿನಂತೆ ಅಧಿಕಾರಗಳನ್ನು ಹೊಂದಿದ್ದಾರೆ. |
| | | 15(5) | (1)To allow production of persons after |
| | | | his removal from brothel under Sub- |
| | | | Section 4 |
| | | 15(5A) | (2)To get such persons medically |
| | | 16 | examined. |
| | | | (3)To direct police officer to enter |
| | | | brothel and to remove any person |
| | | 18(1) | living in brothel or is carrying on |
| | | | prostitution. |
| | | | (4)To issue notice to show cause within |
| | | | 7 days to the owner, landlord etc. of |
| | | 18(1) | the brothel as to why property should |
| | | | not be attached fro improper use. |
| | | | (5) a) To direct eviction after hearing |
| | | 18(1) | the occupier within 7 days of the |
| | | | passing of the order. |
| | | | (b) To direct owner / less or etc. not to |
| | | 19(1) | let it out without permission of the |
| | | | Magistrate. |
| | | | 6) (a) To order applicant to be kept kin |
| | | 19(2) | a protective home or to be provided |
| | | | care and protection. |
| | | | (b) To direct that the applicant be kept |
| | | 19(3) | in proper custody pending inquiry. |
| | | | (c) To order after inquiry that applicant |
| | | | be kept. |
| | | | i) in a protective institution, or |
| | | | ii) in a corrective institution, or |
| | | | iii) under supervision of a person |
| | | 20(1) | appointed by the Magistrate. |

| | | | |
|---|---|---|---|
| | | 20(3) | 10)(a) To record substance of the information received that a person who is residing or frequenting any place is a prostitute.<br>(b) To order her to appear and issue Notice to show cause as to why she should not be required to remove herself from the place and be prohibit ed from re-entering.<br><br>(c)To inquire into the truth of the information after giving opportunity of being heard.<br>(d) To order that she shall remove herself from t he place and shall not re-enter. |
| 4 | Juvenile Justice Act-1986 | 7(2) | ಉಪವಿಭಾಗೀಯ ದಂಡಾಧಿಕಾರಿಗಳು ಈ ಕೆಳಗಿನಂತೆ ಅಧಿಕಾರಗಳನ್ನು ಹೊಂದಿದ್ದಾರೆ.<br>1) To exercise powers conferred on the board or the Juvenile court by or under this Act where no Board on Juvenile court has been constituted for any area.<br>2) To function as Competent Authority where no Board or Juvenile Court has been established. |
| 5 | Official Secrets Act-1923 | 11 | The SDM has to grant search warrant. |
| 6 | Poisons Act ಗ1919 | 7 | The SDM has to issue search warrant. |
| 7 | Press and Registration of Books Act-1867. | 4 | ಉಪವಿಭಾಗೀಯ ದಂಡಾಧಿಕಾರಿಗಳು ಈ ಕೆಳಗಿನಂತೆ ಅಧಿಕಾರಗಳನ್ನು ಹೊಂದಿದ್ದಾರೆ.<br>1) To allow keeper of Printing-press to make declaration. |

| | | | |
|---|---|---|---|
| | | 5(2)<br><br><br>6<br><br><br><br>8-A<br><br><br><br>8-B<br><br><br>19-C | 2) To allow printer or publisher of newspaper appear in person.<br><br>(3) (a) To authenticate the declaration and (b) To attest it.<br>(4) (a) To allow new declaration to be made by a person who ceased to be a printer or publisher.<br>(b) To authenticate such declaration.<br>(5) (a) To enquire whether the name of the editor has been incorrectly published.<br>(b) To Certify.<br>(6) To cancel declaration in respect of a newspaper.<br>(7) To send a copy of the declaration in respect of newspaper. |
| 8 | Prevention of Cruelty to Animals Act,1960. | 33 | The SDM has to issue search warrants or enter himself for search. |
| 9 | Prevention of Seditious Meetings Act, 1911. | 8 | The SDM has to take cognizance of offence under t he Act. |
| 10 | Protection of Civil Right Act 1955 & Rules 1977. | 10-A Read with Rule-3<br>14-A | The SDM has<br>1) to hold an enquiry U/s 10 A in the Context of consideration for Imposition of collective fine.<br>2)to call for information & documents for that purpose of enquiry To be protected from suit or prosecution. |
| 11 | Wakf Act - 1954/55 | 36-E<br>55 | The SDM has to make an order directing the encroacher to remove or to vacate the property and in default, evict the encroacher. |

| | | | |
|---|---|---|---|
| 11 | ಕರ್ನಾಟಕ ವಕ್ಫ ನಿಯಮಗಳು-1997. | ನಿಯಮ 3(3)<br><br>52 ಮತ್ತು 55 | ಉಪವಿಭಾಗಾಧಿಕಾರಿಗಳು ಸಹಾಯಕ ಮೋಜಣಿ ಆಯುಕ್ತರಾಗಿದ್ದಾರೆ<br><br>ಉಪ ವಿಭಾಗೀಯ ದಂಡಾಧಿಕಾರಿಯವರು ವಕ್ಫ ಆಸ್ತಿಗಳ ಮೇಲಿನ ಅತೀಕ್ರಮಣ ತೆಗೆದು ಹಾಕಿ ಅದೇಶಿಸಲು ಅಧಿಕಾರ ಹೊಂದಿದ್ದಾರೆ. |
| 12 | Criminal Law and Identification of Prisoners ( Karnataka Extension and Amendment) Act-1975. | 5<br><br>7<br><br>17 | ಉಪವಿಭಾಗೀಯ ದಂಡಾಧಿಕಾರಿಗಳು ಈ ಕೆಳಗಿನಂತೆ ಅಧಿಕಾರಗಳನ್ನು ಹೊಂದಿದ್ದಾರೆ.<br>1) Directing a person to be photographed under Sec.5 of the Identification of Prisoners Act, 1920 ( Central Act 33 of 1920)<br><br>2) Ordering of destruction of photographs and records of measurements etc on acquittal under Section-7 of the Identification of Prisoners Act, 1920 ( Central Act - 33 of 1920. )<br><br>1) To declare an area to be an area prone to atrocities.<br><br>2) To take preventive action for keeping peace and good behavior and maintenance of public order. |
| 13 | Karnataka Debt Relief Act, 1980 | 4(6) | ಉಪವಿಭಾಗೀಯ ದಂಡಾಧಿಕಾರಿಗಳು ಈ ಕೆಳಗಿನಂತೆ ಅಧಿಕಾರಗಳನ್ನು ಹೊಂದಿದ್ದಾರೆ.<br>Power to order for the return of the moveable property pledged by a debtor in case the creditor fails to return under Section 4 of t he Act. |

| | | | |
|---|---|---|---|
| | | 5(2)(b)<br><br><br><br><br>5 | Power to put the debtor in possession of Mortgaged property on failure of the creditor to do so.<br>A) Determination of debtors entitled to relief u/s-4 and issue of directions to creditors for production of pledged articles<br>B) Power to order search and seizure of pledged articles and their delivery to debtors.. |
| 14 | Karnataka Police Act-1963<br><br>ಸರ್ಕಾರದ ಆದೇಶ<br>ಕ್ರ:HD:27:PCF:82(ii)<br>ದಿನಾಂಕ:02-03-1982 | 41 | The SDM has to discontinue the use of any premises by disorderly persons. |
| | | 55 | The SDM has to remove persons about to commit offences. |
| | | 56 & 58 | ಹಲವಾರು ಸಂದರ್ಭಗಳಲ್ಲಿ ಒಬ್ಬ ವ್ಯಕ್ತಿಯನ್ನು ತನ್ನ ಕಾರ್ಯವ್ಯಾಪ್ತಿಯ ಪ್ರದೇಶದಿಂದ ಗರಿಷ್ಠ ಎರಡು ವರ್ಷಗಳವರೆಗೆ ಗಡಿಪಾರು ಮಾಡುವ ಅಧಿಕಾರವನ್ನು ಉಪವಿಭಾಗೀಯ ದಂಡಾಧಿಕಾರಿಗಳಿಗೆ ಪ್ರತ್ಯಾಯೋಜಿಸಲಾಗಿದೆ. ಹಾಗೆ ಮಾಡುವ ಪೂರ್ವದಲ್ಲಿ ಆ ವ್ಯಕ್ತಿಗೆ ತನ್ನ ಪರ ಅಹವಾಲು ಮಂಡಿಸಲು ಅವಕಾಶ ನೀಡುವುದು ಅವಶ್ಯವಾಗಿದೆ. |
| | | 81 | The SDM has to issue warrants to police officer not below the rank of Sub-Inspector to enter, search and seize instruments of gaming, money etc.. |
| 15 | The SCs / STs ( prevention of Atrocities) Act-1989. | ಕಲಂ<br>4(5) | ಉಪವಿಭಾಗೀಯ ದಂಡಾಧಿಕಾರಿಯವರು ಅಗತ್ಯತೆ ಕಂಡು ಬಂದಲ್ಲಿ ಅಥವಾ ದೌರ್ಜನ್ಯಕ್ಕೆ ಒಳಗಾದ ವ್ಯಕ್ತಿಯ ಬೇಡಿಕೆಯ ಮೇರೆಗೆ ವಿಶೇಷ ನ್ಯಾಯಾಲಯದಲ್ಲಿ ದಾವೆ ಮಂಡಿಸುವಲ್ಲಿ ಪರಿಣಿತ ನ್ಯಾಯವಾದಿಗಳನ್ನು ನೇಮಿಸಲು ಅಧಿಕಾರ ಹೊಂದಿದ್ದಾರೆ. |

| | | | |
|---|---|---|---|
| | | ಕಲಂ 6(1) | ಉಪವಿಭಾಗೀಯ ದಂಡಾಧಿಕಾರಿಗಳು, ಪಜಾ/ಪಪಂ ದವರ ಮೇಲೆ ದೌರ್ಜನ್ಯ ನಡೆದ ಘಟನೆಯು ತಿಳಿದು ಬಂದ ಕೂಡಲೇ ಸ್ಥಳಕ್ಕೆ ಧಾವಿಸಿ ತನಿಖೆ ಕೈಕೊಂಡು, ವಸ್ತುನಿಷ್ಠೆ ವರದಿಯನ್ನು ಸರಕಾರಕ್ಕೆ ಸಲ್ಲಿಸಬೇಕಾಗುತ್ತದೆ. |
| | | ಕಲಂ 6(2) + 11(2) | ದೌರ್ಜನ್ಯಕ್ಕೆ ಒಳಗಾದ ವ್ಯಕ್ತಿಗಳಿಗೆ ಸೂಕ್ತ ರಕ್ಷಣೆ, ಪರಿಹಾರ ಹಾಗೂ ವಿಚಾರಣೆ ನಡೆದ ಸಮಯದಲ್ಲಿ ಪ್ರವಾಸ ಭತ್ಯೆ ಇತ್ಯಾದಿಗಳನ್ನು ಒದಗಿಸಲು, ಉಪವಿಭಾಗೀಯ ದಂಡಾಧಿಕಾರಿಗಳು ಕ್ರಮ ತೆಗೆದುಕೊಳ್ಳಬೇಕಾಗುತ್ತದೆ. |
| | | 17 | 1) To declare an area to be an area prone to atrocities.<br>2) To take preventive action for keeping peace and good behavior and maintenance of public order. |
| 16 | The Explosives Act-1884 | ಕಲಂ 7 ಮತ್ತು 9 | ವಾಯು, ನೌಕಾ ಮತ್ತು ಭೂ ಸೇನಾ ದಳ ವ್ಯಾಪ್ತಿ ಹೊರತುಪಡಿಸಿ ಉಳಿದಂತೆ ಕಲಂ 8 ರಡಿ ದುರ್ಘಟನೆ ಕುರಿತು ಜಿಲ್ಲಾ ದಂಡಾಧಿಕಾರಿಯವರು ವಹಿಸಿ ಕೊಟ್ಟ ವಿಚಾರಣೆಯನ್ನು ಉಪ ವಿಭಾಗೀಯ ದಂಡಾಧಿಕಾರಿಯವರು ಜರುಗಿಸಬಹುದಾಗಿದೆ. |
| 17 | The Gas Cylinders Rules-2004 | ನಿಯಮ 71 | The Explosives Act-1884 ರ ಕಲಂ 7(1) ರಡಿಯಲ್ಲಿ, ಅಧಿಕಾರವನ್ನು ಜಿಲ್ಲಾ ದಂಡಾಧಿಕಾರಿ ಅಧೀನದ ಎಲ್ಲ ದಂಡಾಧಿಕಾರಿಗಳು ತಮ್ಮ ಕಾರ್ಯಕ್ಷೇತ್ರದಲ್ಲಿ ಚಲಾಯಿಸಬಹುದಾಗಿದೆ. |
| 18 | ಆಯುಧ ನಿಯಮಗಳು - 1962 | 4 | ಉಪವಿಭಾಗಾಧಿಕಾರಿಗಳು ರಾಜ್ಯ ಸರಕಾರ ವಹಿಸಿಕೊಡಬಹುದಾದ ನಿರ್ದೇಶನಗಳ ಮೇರೆಗೆ ಆಯುಧ ಅನುಜ್ಞಾ ಪತ್ರ ನೀಡುವ ಅಧಿಕಾರ ಹೊಂದಿದ್ದಾರೆ. |

| | | | |
|---|---|---|---|
| 19 | ಪಾಸಪೋರ್ಟ ಕಾಯ್ದೆ 1967 [ಸರ್ಕಾರದ ಸುತ್ತೋಲೆ ಕ್ರ:DPAR:78:SKM:2000 ದಿನಾಂಕ:23-02-2000] | 6(2) | ಉಪ ವಿಭಾಗೀಯ ದಂಡಾಧಿಕಾರಿಯವರು ಪಾಸಪೋರ್ಟ ಬಯಸುವ ವ್ಯಕ್ತಿಗೆ ನಡತೆ ಪ್ರಮಾಣ ಪತ್ರ ನೀಡುವ ಅಧಿಕಾರ ಹೊಂದಿದ್ದಾರೆ. ಈ ಪ್ರಮಾಣ ಪತ್ರವನ್ನು ತನಗೆ ಪರಿಚಯವಿರುವ ವ್ಯಕ್ತಿಗೆ ಮಾತ್ರ ನೀಡಬಹುದಾಗಿದ್ದು, ಸದರ ಪ್ರಮಾಣ ಪತ್ರ ಕಚೇರಿಯ ಕಡತ ಸಂಖ್ಯೆ, ದಿನಾಂಕ ಒಳಗೊಂಡಿರಬೇಕು. |
| 20 | ಕರ್ನಾಟಕ ಮೋಟಾರು ವಾಹನ ನಿಯಮಗಳು 1963 | 320 (1) (ii) | ಸಾರ್ವಜನಿಕ ಮತ್ತು ಇತರೆ ಸಾರಿಗೆ ಸಂಕೇತಗಳನ್ನು ಇಡಲು ಅಥವಾ ಸೃಜಿಸಲು ಉಪ ವಿಭಾಗಾಧಿಕಾರಿಗಳು ಅನುಮತಿ ನೀಡಬಹುದಾಗಿದೆ. |
| 21 | ಕೇಬಲ್ ಟೆಲಿವಿಷನ್ ನೆಟ್‌ವರ್ಕ್ಸ್ (ರೇಗ್ಯುಲೇಷನ್) ಕಾಯ್ದೆ 2000 (ಕ್ರ:HD326:SST:99 ದಿ:28-11-00) | 11, 18 19 | ಉಪ ವಿಭಾಗೀಯ ದಂಡಾಧಿಕಾರಿಗಳು ಕೇಬಲ್ ಟೆಲಿವಿಷನ್ ನೆಟ್‌ವರ್ಕ್ಸ ನಿಯಂತ್ರಿಸುವ ಅಧಿಕಾರ ಹೊಂದಿದ್ದಾರೆ. |
| 22 | ವಿದ್ಯುತ್ ದುರ್ಬಳಕೆ ಹಾಗೂ ಅನಧಿಕೃತ ಸಂಪರ್ಕ ಕ್ರ:ME:37:PSR:00 ದಿ:15-02-2001 | | ವಿದ್ಯುತ್ ದುರ್ಬಳಕೆ ತಡೆಗಟ್ಟುವ ಕುರಿತು ಉಪ ವಿಭಾಗಾಧಿಕಾರಿಗಳು ತಾಲೂಕಾ ಮಟ್ಟದ ಸಮಿತಿಯ ಅಧ್ಯಕ್ಷರಾಗಿದ್ದಾರೆ. |
| 23 | ಸೋಲಿಶಿಯಂ ಸ್ಕೀಮ್ 1989 ಸರ್ಕಾರದ ಆದೇಶ ಕ್ರ:CT:FA:SL:89-90 ದಿನಾಂಕ:31-07-1989 | | ಈ ಯೋಜನೆಯಡಿ ಬಾಧಿತರ ಕುಟುಂಬದವರಿಗೆ ಪರಿಹಾರಧನ ಮಂಜೂರು ಮಾಡುವ ಪ್ರಕರಣಗಳಲ್ಲಿ ಉಪವಿಭಾಗಾಧಿಕಾರಿಗಳು ವಿಚಾರಣಾಧಿಕಾರಿಗಳಾಗಿದ್ದಾರೆ. |
| 24 | ಸರ್ಕಾರದ ಆದೇಶ ಕ್ರ:ಒಇ:18:ಸಿಒಡಿ:98 ದಿನಾಂಕ:18-02-1999 | | ಪೋಲೀಸ್ ವಶದಲ್ಲಿದ್ದ ಯಾವುದೇ ವ್ಯಕ್ತಿ ಮೃತಪಟ್ಟಲ್ಲಿ ಅವರ ಕುಟುಂಬಕ್ಕೆ ಉಪ ವಿಭಾಗೀಯ ದಂಡಾಧಿಕಾರಿಗಳು ರೂ.1.00 ಲಕ್ಷ ಪರಿಹಾರಧನ ಮಂಜೂರು ಮಾಡಲು ಅಧಿಕಾರ ಹೊಂದಿದ್ದಾರೆ. |
| 25 | ಸರ್ಕಾರದ ಆದೇಶಗಳು ಕ್ರ:HD:75:SST:93 ದಿನಾಂಕ:02-03-1993<br><br>ಕ್ರ:HD:76:CRR:95 ದಿನಾಂಕ:11-12-1995 | | ಮತೀಯ ಗಲಭೆಗಳಲ್ಲಿ ಹಾನಿಗೆ ಒಳಗಾದ ಸಂತ್ರಸ್ತರಿಗೆ ಗರಿಷ್ಠ ರೂ.6,000-00 ಗಳ ಪರಿಹಾರ ಧನವನ್ನು ಮಂಜೂರು ಮಾಡಲು ಉಪ ವಿಭಾಗೀಯ ದಂಡಾಧಿಕಾರಿಗಳು ಅಧಿಕಾರ ಹೊಂದಿದ್ದಾರೆ. ಅದರಂತೆ ಜಿಲ್ಲಾಧಿಕಾರಿಗಳು ರೂ.14,000-00 ಗಳನ್ನು ಮಂಜೂರು ಮಾಡಬಹುದಾಗಿದ್ದು, ಒಟ್ಟಾರೆ ರೂ.20,000-00 ಗಳ ಪರಿಹಾರಧನವನ್ನು ಮಂಜೂರು ಮಾಡಬಹುದಾಗಿದೆ. |

| | | | |
|---|---|---|---|
| 26 | ಸರ್ಕಾರದ ಪತ್ರ ಕ್ರ:RD:30:MRR:2004<br>ದಿನಾಂಕ:17-07-2006 | | ಗಣಕೀಕೃತ ಆರ್.ಟಿ.ಸಿ ಗಳಲ್ಲಿ ಆಗಿರುವ ತಪ್ಪುಗಳನ್ನು ಸರಿಪಡಿಸುವ ಕುರಿತು ಉಪ ವಿಭಾಗಾಧಿಕಾರಿಗಳು ಸೂಕ್ತ ಆದೇಶ ಹೊರಡಿಸಬಹುದಾಗಿದೆ. |
| 27 | ಸಾಲ ತೀರಿಸುವ ಶಕ್ತಿ (ಸಾಲ್ವನ್ಸಿ) ಪ್ರಮಾಣ ಪತ್ರ ನೀಡುವ ಕುರಿತು.<br>ಸರ್ಕಾರದ ಆದೇಶ ಕ್ರ:RD:14:ELR:85<br>ದಿನಾಂಕ:23-09-1994 | | ಉಪ ವಿಭಾಗಾಧಿಕಾರಿಗಳು ರೂ.2,00,000-00 ಗಳ ವರೆಗೆ ಸಾಲ ತೀರಿಸುವ ಪ್ರಮಾಣ ಪತ್ರ ನೀಡಬಹುದಾಗಿದೆ. |
| 28 | ರೈತರ ಆತ್ಮಹತ್ಯೆ<br>ಸರ್ಕಾರದ ಆದೇಶ ಕ್ರ:ಕೃತೋಇ:280:<br>ಕೃಉಇ:2003<br>ದಿನಾಂಕ:18-07-2003 | | ಸಾಲ ನೀಡುವ ಸಂಸ್ಥೆಗಳಿಂದ ಪಡೆದ ಸಾಲದ ಹೊರೆಯಿಂದ ಮಾತ್ರ ಆತ್ಮಹತ್ಯೆ ಮಾಡಿಕೊಂಡ ಪ್ರತಿಯೊಂದು ರೈತರ ಕುಟುಂಬಗಳಿಗೆ ರೂ.1.00 ಲಕ್ಷಗಳಂತೆ ನಗದು ಪರಿಹಾರಧನ ನೀಡಬಹುದಾಗಿದ್ದು, ಇಂತಹ ಪ್ರಕರಣಗಳಲ್ಲಿ ಆತ್ಮಹತ್ಯೆಗೆ ಸಾಲದ ಹೊರೆಯೆ ಕಾರಣ ಎಂಬ ಬಗ್ಗೆ ಖಚಿತಪಡಿಸಿಕೊಂಡು ಆ ಬಗ್ಗೆ ಪ್ರಮಾಣ ಪತ್ರ ನೀಡುವ ಅಧಿಕಾರ ಹೊಂದಿರುವ ಅಧಿಕಾರಿಗಳ ಸಮಿತಿಗೆ ಉಪ ವಿಭಾಗಾಧಿಕಾರಿಗಳು ಅಧ್ಯಕ್ಷರಾಗಿದ್ದಾರೆ. |

<u>ಪ್ರಾದೇಶಿಕ ಆಯುಕ್ತರ ಕಾರ್ಯಾಲಯ, ಬೆಳಗಾವಿ ವಿಭಾಗ, ಬೆಳಗಾವಿ</u>.

# ಉಪವಿಭಾಗಾಧಿಕಾರಿಗಳ ಅಧಿಕಾರ ಹಾಗೂ ಕರ್ತವ್ಯಗಳು

# ಪ ರಿ ವಿ ಡಿ



| ಅ.ನಂ | ವಿಷಯ | ಪುಟ ಸಂಖ್ಯೆ |
|---|---|---|
| 1 | 2 | 3 |
| 1. | ಉಪವಿಭಾಗಾಧಿಕಾರಿಗಳ ಹುದ್ದೆಯ ವಿವರ | 1-2 |
| 2. | ಕರ್ನಾಟಕ ಭೂಕಂದಾಯ ಅಧಿನಿಯಮ 1964 | 3-5 |
| 3. | ಕರ್ನಾಟಕ ಭೂಕಂದಾಯ ನಿಯಮಗಳು 1966 | 5-6 |
| 4. | ಕರ್ನಾಟಕ ಭೂಮಂಜೂರಾತಿ ನಿಯಮಗಳು 1969 | 6 |
| 5. | ಕರ್ನಾಟಕ ಭೂಸುಧಾರಣೆ ಕಾಯ್ದೆ 1961/74 ಹಾಗೂ ನಿಯಮಗಳು 1974 | 7-8 |
| 6. | ಭೂಸ್ವಾಧೀನ ಕಾಯ್ದೆ 1894 | 8 |
| 7. | ಕರ್ನಾಟಕ ಭೂಸ್ವಾಧೀನ (ಗೃಹ ನಿವೇಶನ) ಕಾಯ್ದೆ 1972 | 8-9 |
| 8. | ಕರ್ನಾಟಕ ಭೂಸ್ವಾಧೀನ (ಗೃಹ ನಿವೇಶನ) ನಿಯಮಗಳು 1973 | 9-10 |
| 9. | ಕರ್ನಾಟಕ ಔದ್ಯೋಗಿಕ ಪ್ರದೇಶಾಭಿವೃದ್ಧಿ ನಿಯಮಗಳು 1966 | 10 |
| 10. | The Karnataka Grant of land in case of Construction of Dwelling Houses in occupied land Rules 1999 | 10 |
| 11. | ಕರ್ನಾಟಕ ಪರಿಶಿಷ್ಠ ಜಾತಿ ಮತ್ತು ಪರಿಶಿಷ್ಠ ಪಂಗಡಗಳವರ ( ಹಲವು ಜಮೀನುಗಳ ಪರಭಾರೆ ನಿಷೇಧ) ಕಾಯ್ದೆ 1978 ಹಾಗೂ ನಿಯಮಗಳು 1979 | 10 |
| 12. | ಕರ್ನಾಟಕ ಬಾಡಿಗೆ ನಿಯಂತ್ರಣ ಕಾಯ್ದೆ 1999 | 10 |
| 13. | 1) ಮುಂಬಯಿ ಪರಗಣಾ ಮತ್ತು ಕುಲಕರ್ಣಿ ವತನ ರದ್ಧತಿ ಕಾಯ್ದೆ 1950<br>2) ಮುಂಬಯಿ ಪರ್ಸನಲ್ ಇನಾಂ ರದ್ಧತಿ ಕಾಯ್ದೆ 1952<br>3) ಮುಂಬಯಿ ಸರ್ವಿಸ್ ಇನಾಂ (ಯುಸಫುಲ್ ಟು ಕಮ್ಯೂನಿಟಿ) ರದ್ಧತಿ ಕಾಯ್ದೆ 1953<br>4) ಮುಂಬಯಿ ವಿಲೀನ ಸಂಸ್ಥಾನಗಳ ಮತ್ತು ಪ್ರದೇಶಗಳ (ಜಹಗೀರುಗಳ) ರದ್ಧತಿ ಕಾಯ್ದೆ 1953<br>5) ಮುಂಬಯಿ ವಿಲೀನ ಸಂಸ್ಥಾನಗಳ ಮಿಸಲೇನಿಯಸ್ ಎಲಿನೇಷನ್ ಕಾಯ್ದೆ 1955<br>6) ಮುಂಬಯಿ ಸರಂಜಾಮು ಜಹಗೀರುಗಳು ಮತ್ತು ಇತರೆ ರಾಜಕೀಯ ಸ್ವರೂಪ ನಿಯಮಗಳು 1952 | 11 |

| | | |
|---|---|---|
| 14. | ಕರ್ನಾಟಕ ಹಲವು ಇನಾಂಗಳ ರದ್ಧತಿ ಕಾಯ್ದೆ 1977 | 11 |
| 15. | ಮೈಸೂರ ( ರಿಲಿಜಿಯಸ್ ಮತ್ತು ಚಾರಿಟೆಬಲ್ ಇನಾಂಗಳ ರದ್ದತಿ ಕಾಯ್ದೆ 1955. | 11 |
| 16. | ಕರ್ನಾಟಕ ಅರಣ್ಯ ಕಾಯ್ದೆ 1969 | 11 |
| 17. | ಕರ್ನಾಟಕ ಅರಣ್ಯ ಸಂಹಿತೆ | 11 |
| 18. | ಕರ್ನಾಟಕ ನೀರಾವರಿ ಅಧಿನಿಯಮಗಳು 1965 | 12 |
| 19. | ಕರ್ನಾಟಕ ಭೂ ಅಭಿವೃದ್ಧಿ (ಸಾಲಗಳು) ಕಾಯ್ದೆ 1963 ಮತ್ತು ನಿಯಮಗಳು 1966 | 12 |
| 20. | ಕರ್ನಾಟಕ ಕೃಷಿಕರ (ಸಾಲಗಳು) ಕಾಯ್ದೆ 1963 ಮತ್ತು ನಿಯಮಗಳು 1966 | 12 |
| 21. | ರೈಸ್ ಮಿಲ್ಲಿಂಗ್ ಇಂಡಸ್ಟ್ರೀ (ರೇಗ್ಯೂಲೇಷನ್) ಕಾಯ್ದೆ 1958 | 12 |
| 22. | ಕರ್ನಾಟಕ ಪಂಚಾಯತ ರಾಜ್ ಕಾಯ್ದೆ-1993. | 12-13 |
| 23. | ಕರ್ನಾಟಕ ಪಂಚಾಯತ ರಾಜ್ ( ತಾ .ಪಂ. ಗಳ ಅಧ್ಯಕ್ಷ ಮತ್ತು ಉಪಾಧ್ಯಕ್ಷರ ಚುನಾವಣೆ) ನಿಯಮಗಳು 1994. | 14 |
| 24. | ಕರ್ನಾಟಕ ಪಂಚಾಯತ ರಾಜ್ ( ಗ್ರಾಮ ಪಂಚಾಯತ ಅಧ್ಯಕ್ಷ ಮತ್ತು ಉಪಾಧ್ಯಕ್ಷರ ವಿರುದ್ಧ ಅವಿಶ್ವಾಸ ಮಂಡನೆ) ನಿಯಮಗಳು 1994. | 14 |
| 25. | ಕರ್ನಾಟಕ ಪುರಸಭೆಗಳ ಕಾಯ್ದೆ 1964 | 14-15 |
| 26. | ಸಾರ್ವತ್ರಿಕ ಚುನಾವಣೆಗಳು : ಮತದಾರರ ನೋಂದಣಿ ಅಧಿಕಾರಿಗಳ ಕೈಪಿಡಿ | 15 |
| 27. | ಕರ್ನಾಟಕ ನಾಗರೀಕ ಸೇವೆಗಳ ( ವ, ನಿ ಮತ್ತು ಮೇ ) ನಿಯಮಗಳು-1957. | 15 |
| 28. | ಕರ್ನಾಟಕ ಪರಿಶಿಷ್ಟ ಜಾತಿಗಳು, ಪರಿಶಿಷ್ಟ ಪಂಗಡಗಳು ಮತ್ತು ಇತರ ಹಿಂದುಳಿದ ವರ್ಗಗಳ (ನೇಮಕಾತಿ, ಮೀಸಲಾತಿ ಮತ್ತು ಇತರೆ) ಕಾಯ್ದೆ 1990 ಹಾಗೂ ನಿಯಮಗಳು 1992 ಮತ್ತು ತಿದ್ದುಪಡಿ ನಿಯಮಗಳು 2000 | 15 |
| 29. | The Bounded labour system (Abolition) Act 1976 | 16 |
| 30. | The Bonded Labour System (abolition) Rules-1976. | 17 |
| 31. | Criminal Procedure Code-1973. | 17-18 |
| 32. | Immoral Traffic (Prevention) Act -1956. | 19-20 |
| 33. | Juvenile Justice Act-1986 | 20 |
| 34. | Official Secrets Act-1923 | 20 |
| 35. | Poisons Act -1919 | 20 |
| 36. | Press and Registration of Books Act-1867. | 20-21 |
| 37. | Prevention of Cruelty to Animals Act,1960. | 21 |

| | | |
|---|---|---|
| 38. | Prevention of Seditious Meetings Act, 1911. | 21 |
| 39. | Protection of Civil Right Act 1955 & Rules 1977. | 21 |
| 40. | Wakf Act - 1954/55 | 21 |
| 41. | ಕರ್ನಾಟಕ ವಕ್ಫ ನಿಯಮಗಳು-1997. | 22 |
| 42. | Criminal Law and Identification of Prisoners ( Karnataka Extension and Amendment) Act-1975. | 22 |
| 43. | Karnataka Debt Relief Act, 1980 | 22-23 |
| 44. | Karnataka Police Act-1963 | 23 |
| 45. | The SCs / STs ( prevention of Atrocities) Act-1989. | 23-24 |
| 46. | The Explosives Act-1884 | 24 |
| 47. | The Gas Cylinders Rules-2004 | 24 |
| 48. | ಆಯುಧ ನಿಯಮಗಳು - 1962 | 24 |
| 49. | ಪಾಸಪೋರ್ಟ ಕಾಯ್ದೆ 1967 | 25 |
| 50. | ಕರ್ನಾಟಕ ಮೋಟಾರು ವಾಹನ ನಿಯಮಗಳು 1963 | 25 |
| 51. | ಕೇಬಲ್ ಟೆಲಿವಿಷನ್ ನೆಟ್‌ವರ್ಕ್ಸ (ರೇಗ್ಯುಲೇಷನ್) ಕಾಯ್ದೆ 2000 | 25 |
| 52. | ವಿದ್ಯುತ್ ದುರ್ಬಳಕೆ ಹಾಗೂ ಅನಧಿಕೃತ ಸಂಪರ್ಕ | 25 |
| 53. | ಸೋಲಿಶಿಯಂ ಸ್ಕೀಮ್ 1989 | 25 |
| 54. | ಸರ್ಕಾರದ ಆದೇಶ ಕ್ರ:ಒಇ:18:ಸಿಒಡಿ:98 ದಿ:18-02-1999 | 25 |
| 55. | ಸರ್ಕಾರದ ಆದೇಶಗಳು<br>ಕ್ರ:HD:75:SST:93 ದಿನಾಂಕ:02-03-1993<br>ಕ್ರ:HD:76:CRR:95 ದಿನಾಂಕ:11-12-1995 | 25 |
| 56. | ಸರ್ಕಾರದ ಪತ್ರ ಕ್ರ:RD:30:MRR:2004 ದಿನಾಂಕ:17-07-2006 | 26 |
| 57. | ಸಾಲ ತೀರಿಸುವ ಶಕ್ತಿ (ಸಾಲ್ವನ್ಸಿ) ಪ್ರಮಾಣ ಪತ್ರ ನೀಡುವ ಕುರಿತು.<br>ಸರ್ಕಾರದ ಆದೇಶ ಕ್ರ:RD:14:ELR:85 ದಿನಾಂಕ:23-09-1994 | 26 |
| 58. | ರೈತರ ಆತ್ಮಹತ್ಯೆ -<br>ಸರ್ಕಾರದ ಆದೇಶ ಕ್ರ:ಕೃತೋಇ:280:ಕೃಉಇ:2003 ದಿ:18-07-2003 | 26 |
| 59. | ಸರ್ಕಾರದ ಆದೇಶಗಳು/ಸುತ್ತೋಲೆಗಳು | 27-70 |